# ಪ್ರವಾದಿ(ﷺ)ರವರ ಸುನ್ನತ್ತಿನ ಪ್ರಕಾರ ಅಮಲ್ ಮಾಡಬೇಕಾದ ಅನಿವಾರ್ಯತೆ ಮತ್ತು ಅದನ್ನು ತಿರಸ್ಕರಿಸುವವನ ಕುಫ್ರ್

بسم الله الرحمن الرحيم

**ಪರಮ ದಯಾಮಯನೂ ಕರುಣಾಮಯಿಯೂ**
**ಆದ ಅಲ್ಲಾಹುವಿನ ನಾಮದಿಂದ**

الشيخ العلامة عبد العزيز بن عبد الله بن باز رحمه الله تعالى

ಅಶ್ಶೈಖ್ ಅಬ್ದುಲ್ ಅಝೀಝ್ ಇಬ್ನ್ ಅಬ್ದಿಲ್ಲಾಹ್ ಇಬ್ನ್ ಬಾಝ್(ﷺ)

# وجوب العمل بسنة الرسول صلى الله عليه وآله وسلم وكفر من أنكرها

# ಪ್ರವಾದಿ(ﷺ)ರವರ ಸುನ್ನತ್ತಿನ ಪ್ರಕಾರ ಅಮಲ್ ಮಾಡಬೇಕಾದ ಅನಿವಾರ್ಯತೆ ಮತ್ತು ಅದನ್ನು ತಿರಸ್ಕರಿಸುವವನ ಕುಫ್ರ್

ಅನುವಾದ:
ಪಿ. ಬಿ. ಮುಹಮ್ಮದ್ ಸಾದಿಕ್

ಪ್ರಕಾಶಕರು:
ಮನ್‌ಹಜ್ ಅಲ್‌ಅಂಬಿಯಾ ಕಾಲ್ & ಗೈಡೆನ್ಸ್ ಸೆಂಟರ್
ಮಂಗಳೂರು

ALL RIGHTS RESERVED © جميع الحقوق محفوظة

no part of this book may be reproduced or transmitted in any form or by any means, electronic, mechanical, including photocopy, recording, or any information storage and retrieval system, without permission in writing from the publisher

First Edition: Oct 2007
Second Edition: Mar 2013

Title : Pravadi(ﷺ)ravara Sunnattina Prakara Amal Madabekada Anivaryate Matt Adannu Tiraskarisuvavana Kufr
Author : As Shaykh Abdul Azeez Ibn Abdillah Ibn Baaz
Translation: P B Muhammad Saadique
Printers : Pixel Printers & Designers, Mangalore
Copies : 2000
Price : 25.00

Typesetting & DTP :

IMAGE PUBLICATIONS
PUTTUR - 574 201
*imageputtur@hotmail.com*

---

PUBLISHERS:

Manhaj-Al-Ambiya
Call & Guidance Centre
Mangalore - 575 001
*email: al.ambiya@gmail.com*
*dawathu-salafiyya@hotmail.com*

## ಒಳಪುಟಗಳಲ್ಲಿ....

ಪ್ರವಾದಿ(ﷺ)ರವರ ಸುನ್ನತ್ತಿನ ಪ್ರಕಾರ ಅಮಲ್ ಮಾಡಬೇಕಾದ ಅನಿವಾರ್ಯತೆ ಮತ್ತು ಅದನ್ನು ತಿರಸ್ಕರಿಸುವವನ ಕುಫ್ರ್ 7

ಮೊಟ್ಟಮೊದಲ ಆಧಾರ ಪ್ರಮಾಣ: ಅಲ್ಲಾಹನ ಗ್ರಂಥ 8

ಎರಡನೆಯ ಆಧಾರ ಪ್ರಮಾಣ: ಪ್ರವಾದಿ(ﷺ)ರವರ ಅಧಿಕೃತ ವಚನಗಳು 12

ಸುನ್ನತ್ತನ್ನು ಗೌರವಿಸುವುದು ಮತ್ತು ಅದರ ಪ್ರಕಾರ ಅಮಲ್ ಮಾಡುವುದು ಕಡ್ಡಾಯವಾಗಿದೆಯೆಂಬ ಬಗ್ಗೆ ಸಹಾಬಾಗಳ, ತಾಬಿಊನ್‌ಗಳ ಮತ್ತು ಅವರ ನಂತರದ ವಿದ್ವಾಂಸರ ಅಭಿಪ್ರಾಯಗಳು 23

# كلمة الناشر

بسم الله الرحمن الرحيم

الحمد لله رب العالمين والصلاة والسلام على أشرف الأنبياء والمرسلين وآله وصحبه أجمعين، أما بعد:

إن للسنة النبوية مكانة عظيمة في التشريع الإسلامي. فهي الأصل الثاني بعد القرآن الكريم، والتطبيق العملي لما جاء فيه، وهي الكاشفة لغوامضه، المجلية لمعانيه، الشارحة لألفاظه ومبانيه. وإذا كان القرآن قد وضع القواعد والأسس العامة للتشريع والأحكام، فإن السنة قد عنيت بتفصيل هذه القواعد، وبيان تلك الأسس، وتفريع الجزئيات على الكليات. ولذا فإنه لا يمكن للدين أن يكتمل ولا للشريعة أن تتم إلا بأخذ السنة جنباً إلى جنب مع القرآن.

وقد بين المؤلف رحمه الله تعالى وجوب العمل بالسنة النبوية وكفر من أنكرها من الآيات والأحاديث التي جاءت آمرة بطاعة الرسول صلى الله عليه وآله وسلم، وما ورد من إجماع الأمة وأقوال الأئمة في إثبات حجيتها ووجوب الأخذ بها.

ونسأل الله أن يجعله في ميزان الحسنات للمصنف والمترجم وأن ينفع به المسلمين وأن يضاعف الأجر لكل من سعى في نشره وإيصاله إلى من يستفيد منه إنه سبحانه جواد كريم.

وصلى الله على نبينا محمد وآله وصحبه وسلم.

# وجوب العمل بسنة الرسول صلى الله عليه وسلم وكفر من أنكرها

# ಪ್ರವಾದಿ(ﷺ)ರವರ ಸುನ್ನತ್ತಿನ ಪ್ರಕಾರ ಅಮಲ್ ಮಾಡಬೇಕಾದ ಅನಿವಾರ್ಯತೆ ಮತ್ತು ಅದನ್ನು ತಿರಸ್ಕರಿಸುವವನ ಕುಫ್ರ್

بسم الله الرحمن الرحيم

ಸರ್ವ ಸ್ತುತಿಗಳು ರಬ್ಬುಲ್ ಆಲಮೀನ್ ಆಗಿರುವ ಅಲ್ಲಾಹನಿಗೆ. ಅಂತಿಮ ಫಲಿತಾಂಶವು ಮುತ್ತಕೀಗಳಿಗಾಗಿದೆ. ಅಲ್ಲಾಹನ ಸಲಾತ್ ಮತ್ತು ಸಲಾಮ್‌ಗಳು ಸರ್ವಲೋಕದವರಿಗೆ ಒಂದು ಅನುಗ್ರಹವಾಗಿ ಮತ್ತು ಸೃಷ್ಟಿಗಳ ಮೇಲೆ ಒಂದು ಪುರಾವೆಯಾಗಿ ಕಳುಹಿಸಲಾಗಿರುವ ಅವನ ದಾಸರೂ ಸಂದೇಶವಾಹಕರೂ ಆಗಿರುವ ನಮ್ಮ ಪ್ರವಾದಿ ಮುಹಮ್ಮದ್(ﷺ)ರವರ ಮೇಲಿರಲಿ. ತಮ್ಮ ರಬ್ಬ್‌ನ ಗ್ರಂಥವನ್ನು ಮತ್ತು ತಮ್ಮ ಪ್ರವಾದಿ(ﷺ)ರವರ ಸುನ್ನತ್ತನ್ನು, ಪರಿಪೂರ್ಣ ವಿಶ್ವಾಸಾರ್ಹತೆ ಮತ್ತು ನಿಖರತೆಯೊಂದಿಗೆ, ಅದರ ಅರ್ಥ ಮತ್ತು ಪದಗಳನ್ನು ಸಂಪೂರ್ಣವಾಗಿ ಸಂರಕ್ಷಿಸುವುದರೊಂದಿಗೆ ತಮ್ಮ ನಂತರದ ತಲೆಮಾರಿಗೆ ತಲುಪಿಸಿದ ಅವರ ಕುಟುಂಬ ಮತ್ತು ಸಹಾಬಾಗಳ ಮೇಲೂ ಇರಲಿ. –ಅಲ್ಲಾಹು ಅವರ ಬಗ್ಗೆ ಸಂತೃಪ್ತನಾಗಿದ್ದಾನೆ ಮತ್ತು ಅವರು ಅಲ್ಲಾಹನ ಬಗ್ಗೆ ಸಂತೃಪ್ತರಾಗಿದ್ದಾರೆ– ಅವರನ್ನು ಅತ್ಯುತ್ತಮ ವಿಧದಲ್ಲಿ ಅನುಸರಿಸುವವರ ಪೈಕಿ ಅಲ್ಲಾಹು ನಮ್ಮನ್ನೂ ಸೇರಿಸಲಿ.

ಮುಂದುವರಿದು ಹೇಳುವುದೇನೆಂದರೆ,

ಪೂರ್ವಿಕ ಮತ್ತು ಆಧುನಿಕ ವಿದ್ವಾಂಸರೂ ಸೇರಿದಂತೆ ಎಲ್ಲರ ಒಮ್ಮತಾಭಿಪ್ರಾಯ (ಇಜ್ಮಾಅ್)ದ ಪ್ರಕಾರ ಇಸ್ಲಾಮೀ ನಿಯಮಗಳ ಸ್ಥಾಪನೆಗೆ ಮತ್ತು ಹರಾಮ್ ಹಲಾಲ್‌ಗಳು ಯಾವುದಾಗಿದೆಯೆಂದು ನಿರ್ಧರಿಸುವುದಕ್ಕೆ ಇರುವ ಆಧಾರ ಪ್ರಮಾಣಗಳು:

ಮೊದಲನೆಯದಾಗಿ, ತನ್ನ ಮುಂದಿನಿಂದಾಗಲಿ, ಹಿಂದಿನಿಂದಾಗಲಿ ಪ್ರಮಾದವು ಬಂದು ಸೇರದ ಅಲ್ಲಾಹನ ಗ್ರಂಥವಾದ ಕುರ್‌ಆನ್.

ಎರಡನೆಯದಾಗಿ, ಸ್ವಯಂ ಚಿತ್ತದಂತೆ ಏನನ್ನೂ ಹೇಳದ ಹಾಗೂ ಅಲ್ಲಾಹನ ವಹ್ಯನ್ನು ಅನುಸರಿಸಿ ಮಾತ್ರ ಧಾರ್ಮಿಕ ವಿಧಿಯನ್ನು ಕಲಿಸಿಕೊಟ್ಟ ಪ್ರವಾದಿ ಮುಹಮ್ಮದ್ (ﷺ)ರವರ ಸುನ್ನತ್ (ಚರ್ಯೆ).

ಮೂರನೆಯದಾಗಿ, ಸಮುದಾಯದ ವಿದ್ವಾಂಸರ ಇಜ್ಮಾಅ್ (ಒಮ್ಮತಾಭಿಪ್ರಾಯ).

ವಿದ್ವಾಂಸರು ಭಿನ್ನಾಭಿಪ್ರಾಯದಲ್ಲಿರುವ ಇತರ ಆಧಾರ ಪ್ರಮಾಣಗಳ ಪೈಕಿ ಅತ್ಯಂತ ಪ್ರಮುಖವಾದುದು ಕಿಯಾಸ್ ಆಗಿದೆ. ಹೆಚ್ಚಿನ ವಿದ್ವಾಂಸರ ಅಭಿಪ್ರಾಯ ಪ್ರಕಾರ ನಿರ್ಧಾರಿತ ಶರ್ತಗಳು ಪೂರ್ತೀಕರಿಸಲ್ಪಡುವುದಾದರೆ ಕಿಯಾಸ್ ಕೂಡ ನಿಯಮಗಳ ಸ್ಥಾಪನೆಗೆ ಆಧಾರ ಪ್ರಮಾಣವಾಗಬಲ್ಲುದು ಎಂದಾಗಿದೆ.

## الأصل الأول: كتاب الله العزيز

## ಮೊಟ್ಟಮೊದಲ ಆಧಾರ ಪ್ರಮಾಣ: ಅಲ್ಲಾಹನ ಗ್ರಂಥ

ಕುರ್‌ಆನ್, ಇದು ಸರ್ವಶಕ್ತನಾದ ಅಲ್ಲಾಹನ ಗ್ರಂಥವಾಗಿದೆ. ಇದರಲ್ಲಿರುವ ಅಲ್ಲಾಹನ ವಚನಗಳು ಈ ಗ್ರಂಥವನ್ನು ಅದು ಸೂಚಿಸಿದ ಮೇರೆಯನ್ನು ಕಿಂಚಿತ್ತೂ ಮೀರದಂತೆ ಕಟ್ಟುನಿಟ್ಟಾಗಿ ಅನುಸರಿಸುವ ಹೊಣೆಗಾರಿಕೆಯನ್ನು ಕಡ್ಡಾಯಗೊಳಿಸುತ್ತದೆ.

ಅಲ್ಲಾಹು ಹೇಳುತ್ತಾನೆ:

﴿ ٱتَّبِعُواْ مَآ أُنزِلَ إِلَيۡكُم مِّن رَّبِّكُمۡ وَلَا تَتَّبِعُواْ مِن دُونِهِۦٓ أَوۡلِيَآءَۗ قَلِيلٗا مَّا تَذَكَّرُونَ ٣ ﴾

**“ನಿಮ್ಮ ರಬ್ಬ್‌ನ ವತಿಯಿಂದ ನಿಮ್ಮೆಡೆಗೆ ಅವತೀರ್ಣಗೊಂಡಿರುವುದನ್ನು ನೀವು ಅನುಸರಿಸಿರಿ. ಅವನ ಹೊರತು ಅನ್ಯ ರಕ್ಷಕರನ್ನು ಅನುಸರಿಸದಿರಿ. ನೀವು ಸ್ವಲ್ಪವೇ ಚಿಂತಿಸಿ ಅರ್ಥಮಾಡಿಕೊಳ್ಳುತ್ತಿರುವಿರಿ.”** [1]

ಅಲ್ಲಾಹು ಹೇಳುತ್ತಾನೆ:

﴿ وَهَٰذَا كِتَٰبٌ أَنزَلۡنَٰهُ مُبَارَكٞ فَٱتَّبِعُوهُ وَٱتَّقُواْ لَعَلَّكُمۡ تُرۡحَمُونَ ١٥٥ ﴾

**“ಇದು ನಾವು ಅವತೀರ್ಣಗೊಳಿಸಿದ ಒಂದು ಅನುಗ್ರಹೀತ ಗ್ರಂಥವಾಗಿದೆ. ಆದ್ದರಿಂದ ಇದನ್ನು ಅನುಸರಿಸಿರಿ ಮತ್ತು ಭಯಭಕ್ತಿ ಪಾಲಿಸಿರಿ. ನಿಮಗೆ ಕಾರುಣ್ಯವು**

1 ಕುರ್‌ಆನ್ 7:3

**ಲಭ್ಯವಾಗಲೂಬಹುದು.”** [2]

ಅಲ್ಲಾಹು ಹೇಳುತ್ತಾನೆ:

﴿ يَـٰٓأَهۡلَ ٱلۡكِتَـٰبِ قَدۡ جَآءَكُمۡ رَسُولُنَا يُبَيِّنُ لَكُمۡ كَثِيرٗا مِّمَّا كُنتُمۡ تُخۡفُونَ مِنَ ٱلۡكِتَـٰبِ وَيَعۡفُواْ عَن كَثِيرٖۚ قَدۡ جَآءَكُم مِّنَ ٱللَّهِ نُورٞ وَكِتَـٰبٞ مُّبِينٞ ﴿١٥﴾ يَهۡدِي بِهِ ٱللَّهُ مَنِ ٱتَّبَعَ رِضۡوَٰنَهُۥ سُبُلَ ٱلسَّلَـٰمِ وَيُخۡرِجُهُم مِّنَ ٱلظُّلُمَـٰتِ إِلَى ٱلنُّورِ بِإِذۡنِهِۦ وَيَهۡدِيهِمۡ إِلَىٰ صِرَٰطٖ مُّسۡتَقِيمٖ ﴿١٦﴾ ﴾

**“ಓ ಗ್ರಂಥದವರೇ! ನೀವು ಗ್ರಂಥದಿಂದ ಮರೆ ಮರೆಮಾಚುತ್ತಿದ್ದ ಅನೇಕ ವಿಷಯಗಳನ್ನು ನಿಮಗೆ ಬಹಿರಂಗಪಡಿಸುತ್ತಾ ನಮ್ಮ ಸಂದೇಶವಾಹಕರು (ಇಗೋ) ನಿಮ್ಮ ಬಳಿಗೆ ಬಂದಿರುವರು. ಹೆಚ್ಚಿನವುಗಳನ್ನೂ ಅವರು ಕ್ಷಮಿಸುವರು. ನಿಮಗೆ ಅಲ್ಲಾಹುವಿನ ವತಿಯಿಂದ ಒಂದು ಪ್ರಕಾಶವೂ ಸ್ಪಷ್ಟವಾದ ಒಂದು ಗ್ರಂಥವೂ ಬಂದಿದೆ. ತನ್ನ ಸಂತೃಪ್ತಿಯನ್ನು ಅರಸುತ್ತಿರುವವರನ್ನು ಅಲ್ಲಾಹು ಅದರ ಮೂಲಕ ಶಾಂತಿಯ ಹಾದಿಗಳೆಡೆಗೆ ಮುನ್ನಡೆಸುವನು. ಅವನು ಅವರನ್ನು ತನ್ನ ಅಪ್ಪಣೆಯೊಂದಿಗೆ ಅಂಧಕಾರಗಳಿಂದ ಪ್ರಕಾಶದೆಡೆಗೆ ಹೊರತರುವನು ಮತ್ತು ಅವರನ್ನು ನೇರವಾದ ಮಾರ್ಗದೆಡೆಗೆ ಮುನ್ನಡೆಸುವನು.”** [3]

ಅಲ್ಲಾಹು ಹೇಳುತ್ತಾನೆ:

﴿ إِنَّ ٱلَّذِينَ كَفَرُواْ بِٱلذِّكۡرِ لَمَّا جَآءَهُمۡۖ وَإِنَّهُۥ لَكِتَـٰبٌ عَزِيزٞ ﴿٤١﴾ لَّا يَأۡتِيهِ ٱلۡبَٰطِلُ مِنۢ بَيۡنِ يَدَيۡهِ وَلَا مِنۡ خَلۡفِهِۦۖ تَنزِيلٞ مِّنۡ حَكِيمٍ حَمِيدٖ ﴿٤٢﴾ ﴾

**“ಖಂಡಿತವಾಗಿಯೂ ಈ ಉಪದೇಶವು ಅವರ ಬಳಿಗೆ ಬಂದಾಗ ಅದನ್ನು ನಿಷೇಧಿಸಿದವರು (ನಷ್ಟ ಹೊಂದಿದವರಾಗಿರುವವರು). ಖಂಡಿತವಾಗಿಯೂ**

---

2 **ಕುರ್‌ಆನ್** 6:155

3 **ಕುರ್‌ಆನ್** 5:15–16

**ಅದೊಂದು ಪ್ರತಾಪಶಾಲಿ ಗ್ರಂಥವಾಗಿದೆ. ಅದರ ಮುಂದಿನಿಂದಾಗಲಿ, ಹಿಂದಿನಿಂದಾಗಲಿ ಅಸತ್ಯವು ಅದರಲ್ಲಿ ಸೇರದು. ಅದು ಯುಕ್ತಿಪೂರ್ಣನೂ ಸ್ತುತ್ಯರ್ಹನೂ ಆಗಿರುವವನಿಂದ ಅವತೀರ್ಣಗೊಂಡಿರುವುದಾಗಿದೆ.”** [4]

ಅಲ್ಲಾಹು ಹೇಳುತ್ತಾನೆ:

﴿ وَأُوحِيَ إِلَيَّ هَٰذَا ٱلْقُرْءَانُ لِأُنذِرَكُم بِهِۦ وَمَنۢ بَلَغَ ﴾

**“ಈ ಕುರ್‌ಆನನ್ನು ನನಗೆ ದಿವ್ಯಸಂದೇಶವಾಗಿ ನೀಡಲಾಗಿರುವುದು ಇದರ ಮೂಲಕ ನಿಮಗೆ ಮತ್ತು ಇದು (ಇದರ ಸಂದೇಶವು) ತಲುಪುವ ಸರ್ವರಿಗೂ ನಾನು ಮುನ್ನೆಚ್ಚರಿಕೆ ನೀಡುವ ಸಲುವಾಗಿದೆ.”** [5]

ಅಲ್ಲಾಹು ಹೇಳುತ್ತಾನೆ:

﴿ هَٰذَا بَلَٰغٌ لِّلنَّاسِ وَلِيُنذَرُوا۟ بِهِۦ ﴾

**“ಇದು ಮನುಷ್ಯರಿಗಿರುವ ಒಂದು ಸುಸ್ಪಷ್ಟ ಉಪದೇಶವಾಗಿದೆ. ಇದರ ಮೂಲಕ ಅವರಿಗೆ ಮುನ್ನೆಚ್ಚರಿಕೆ ನೀಡಲಾಗುವ ಸಲುವಾಗಿ.”** [6]

ಇಂತಹ ಅನೇಕ ಆಯತ್‌ಗಳು ಕುರ್‌ಆನ್‌ನಲ್ಲಿವೆ. ಇನ್ನು ಕುರ್‌ಆನನ್ನು ಅನುಸರಿಸಲು ಆದೇಶಗಳಿರುವ ಅನೇಕ ಹದೀಸ್‌ಗಳನ್ನೂ ನಾವು ಕಾಣಬಹುದು. ಯಾರು ಕುರ್‌ಆನನ್ನು ಅನುಸರಿಸಿದನೋ ಅವನು ಸನ್ಮಾರ್ಗದಲ್ಲಾದನು. ಯಾರು ನಿಷೇಧಿಸಿದನೋ ಅವನು ಪಥಭ್ರಷ್ಟತೆಯಲ್ಲಾದನು. ಪ್ರವಾದಿ(ﷺ)ರವರು ‘ಹಜ್ಜತುಲ್ ವದಾಅ್’ನ ಸಂದರ್ಭದಲ್ಲಿ ನೀಡಿದ ಪ್ರವಚನವು ಇದನ್ನು ಇನ್ನಷ್ಟು ದೃಢಗೊಳಿಸುತ್ತದೆ.

«إِنِّي تَارِكٌ فِيكُمْ مَا لَنْ تَضِلُّوا إِنِ اعْتَصَمْتُمْ بِهِ كِتَابَ اللَّهِ»

**“ನಾನು ನಿಮ್ಮ ಮಧ್ಯೆ ಒಂದು ವಸ್ತುವನ್ನು ಬಿಟ್ಟುಹೋಗುತ್ತಿದ್ದೇನೆ. ಅದನ್ನು**

---

**4** **ಕುರ್‌ಆನ್** 41:41–42

**5** **ಕುರ್‌ಆನ್** 6:19

**6** **ಕುರ್‌ಆನ್** 14:52

**ಗಟ್ಟಿಯಾಗಿ ಹಿಡಿದಿರುವ ತನಕ ನೀವೆಂದೂ ದಾರಿ ತಪ್ಪಲಾರಿರಿ. ಅದು ಅಲ್ಲಾಹನ ಗ್ರಂಥ (ಕುರ್‌ಆನ್) ಆಗಿದೆ.”** (7)

ಇನ್ನು ಝೈದ್ ಇಬ್ನ್ ಅರ್ಕಂ(رضي الله عنه)ರಿಂದ ವರದಿಯಾದ ಹದೀಸೊಂದು ಹೀಗಿದೆ:

«إِنِّي تَارِكٌ فِيكُمْ ثَقَلَيْنِ، أَوَّلُهُمَا كِتَابُ اللَّهِ، فِيهِ الْهُدَى وَالنُّورُ، فَخُذُوا بِكِتَابِ اللَّهِ وَتَمَسَّكُوا بِهِ»

**“ಮತ್ತು ನಾನು ನಿಮ್ಮ ಮಧ್ಯೆ ಎರಡು ಭಾರವಾದ ವಸ್ತುಗಳನ್ನು ಬಿಟ್ಟು ಹೋಗುತ್ತಿದ್ದೇನೆ. ಅವುಗಳಲ್ಲಿ ಮೊದಲನೆಯದು ಅಲ್ಲಾಹನ ಗ್ರಂಥ. ಅದರಲ್ಲಿ ಮಾರ್ಗದರ್ಶನ ಮತ್ತು ಪ್ರಕಾಶವಿದೆ. ಆದುದರಿಂದ ನೀವು ಅಲ್ಲಾಹನ ಗ್ರಂಥವನ್ನು ಹಿಡಿಯಿರಿ ಮತ್ತು ಅದನ್ನು ಬಿಗಿಯಾಗಿ ಹಿಡಿದುಕೊಳ್ಳಿರಿ.”** (8)

ಪ್ರವಾದಿ(ﷺ)ರವರು ಅಲ್ಲಾಹನ ಗ್ರಂಥದ ಬಗ್ಗೆ ಜನರಲ್ಲಿ ಶಿಫಾರಸು ಮಾಡಿರುವರು. ನಂತರ ಪ್ರವಾದಿ(ﷺ)ರವರು ಹೇಳಿದರು:

«وَأَهْلُ بَيْتِي، أُذَكِّرُكُمُ اللَّهَ فِي أَهْلِ بَيْتِي، أُذَكِّرُكُمُ اللَّهِ فِي أَهْلِ بَيْتِي»

**“ನನ್ನ ಕುಟುಂಬ, ನನ್ನ ಕುಟುಂಬದ ಬಗ್ಗೆ ಅಲ್ಲಾಹನನ್ನು ನಿಮಗೆ ನೆನಪಿಸುತ್ತಿದ್ದೇನೆ. ನನ್ನ ಕುಟುಂಬದ ಬಗ್ಗೆ ಅಲ್ಲಾಹನನ್ನು ನಿಮಗೆ ನೆನಪಿಸುತ್ತಿದ್ದೇನೆ.”** (9)

ಇನ್ನೊಂದು ವರದಿಯಲ್ಲಿ ಹೀಗಿದೆ:

«هُوَ حَبْلُ اللَّهِ، مَنْ تَمَسَّكَ بِهِ كَانَ عَلَى الْهُدَى، وَمَنْ تَرَكَهُ كَانَ عَلَى

---

**7** ಸಹೀಹ್ ಮುಸ್ಲಿಮ್ (1218), ಸುನನ್ ಅಬೀ ದಾವೂದ್ (1905), ಸುನನ್ ಇಬ್ನ್ ಮಾಜ (3074)

**8** ಸಹೀಹ್ ಮುಸ್ಲಿಮ್ (2408), ಮುಸ್ನದ್ ಅಹ್ಮದ್ ಇಬ್ನ್ ಹಂಬಲ್ (4/367), ಸುನನು ದ್ದಾರಿಮೀ (3316)

**9** ಸಹೀಹ್ ಮುಸ್ಲಿಮ್ (2408), ಮುಸ್ನದ್ ಅಹ್ಮದ್ ಇಬ್ನ್ ಹಂಬಲ್ (4/367), ಸುನನು ದ್ದಾರಿಮೀ (3316)

الضَّلَالِ»

**“ಅದು ಅಲ್ಲಾಹನ ಪಾಶವಾಗಿದೆ. ಅದನ್ನು ಭದ್ರವಾಗಿ ಹಿಡಿದುಕೊಂಡವನು ಸನ್ಮಾರ್ಗದಲ್ಲಿರುವನು ಮತ್ತು ಅದನ್ನು ತೊರೆದವನು ಪಥಭ್ರಷ್ಟತೆಯಲ್ಲಿರುವನು.”** **(10)**

ಇಂತಹ ತಾತ್ಪರ್ಯಗಳನ್ನು ಹೊಂದಿರುವ ಅನೇಕ ಹದೀಸ್‌ಗಳಿವೆ. ಪ್ರವಾದಿ(ﷺ) ರವರ ಅನುಯಾಯಿಗಳು ಮತ್ತು ತದನಂತರದ ತಲೆಮಾರಿನ ಸತ್ಯವಿಶ್ವಾಸಿ ವಿದ್ವಾಂಸರ ಮಧ್ಯೆ ಅಲ್ಲಾಹನ ಗ್ರಂಥಕ್ಕೆ ಬಲವಾಗಿ ಅಂಟಿಕೊಳ್ಳುವುದು ಮತ್ತು ಭಿನ್ನಾಭಿಪ್ರಾಯ ತಲೆದೋರಿದಾಗ ಕುರ್‌ಆನ್ ಹಾಗೂ ಪ್ರವಾದಿಚರ್ಯೆಯ ಮೂಲಕ ತೀರ್ಪು ನೀಡುವುದರ ವಿಷಯದಲ್ಲಿ ಇಜ್ಮಾಅ್ (ಒಮ್ಮತಾಭಿಪ್ರಾಯ) ಇತ್ತು. ಇಸ್ಲಾಮೀ ನಿಯಮಗಳ ಸ್ಥಾಪನೆಗೆ ಮತ್ತು ಹರಾಮ್ ಹಲಾಲ್‌ಗಳಾವುದೆಂದು ನಿಶ್ಚಯಿಸುವುದಕ್ಕೆ ಮೊಟ್ಟಮೊದಲನೆಯ ಆಧಾರ ಪ್ರಮಾಣವು ಕುರ್‌ಆನ್ ಆಗಿದೆ ಎಂಬುದಕ್ಕೆ ಇದಕ್ಕಿಂತ ಹೆಚ್ಚಿನ ಪುರಾವೆ ಇನ್ನೇನು ಬೇಕು?

## الأصل الثاني: ما صح عن رسول الله صلى الله عليه وسلم

## ಎರಡನೆಯ ಆಧಾರ ಪ್ರಮಾಣ: ಪ್ರವಾದಿ(ﷺ)ರವರ ಅಧಿಕೃತ ವಚನಗಳು

ಅಲ್ಲಾಹನ ಪ್ರವಾದಿ ಮುಹಮ್ಮದ್(ﷺ)ರವರ ಅನುಯಾಯಿಗಳೂ, ತದನಂತರದ ತಲೆಮಾರುಗಳಲ್ಲಿನ ವಿದ್ವಾಂಸರೂ ಈ ಮೂಲಭೂತ ಆಧಾರ ಪ್ರಮಾಣದಲ್ಲಿ ಅಚಲ ವಿಶ್ವಾಸವಿರಿಸಿದವರಾಗಿದ್ದರು. ಅವರು ಇದನ್ನು ತಮ್ಮ ಸಮುದಾಯಕ್ಕೂ ಬೋಧಿಸಿದರು. ಈ ಬಗ್ಗೆ ಅವರು ಹಲವಾರು ಗ್ರಂಥಗಳನ್ನೇ ಬರೆದರು. ಕರ್ಮಶಾಸ್ತ್ರದ ಮೂಲ ತತ್ವ (ಉಸೂಲುಲ್ ಫಿಕ್‌ಹ್) ಎಂಬುದಾಗಿ ಅವರು ಇದನ್ನು ಪರಿಗಣಿಸಿದರು.

ಸುನ್ನತ್ ಅರ್ಥಾತ್ ಅಲ್ಲಾಹನ ಪ್ರವಾದಿ(ﷺ)ರವರ ಕಡ್ಡಾಯ ಅನುಸರಣೆಯು ಕುರ್‌ಆನ್‌ನಲ್ಲಿರುವ ಆದೇಶವೇ ಆಗಿದೆ. ಪ್ರವಾದಿ(ﷺ)ರವರ ಅನುಸರಣೆಯನ್ನು ಅವರ ಕಾಲದ ಅನುಯಾಯಿಗಳಿಗೂ ಅವರ ಬಳಿಕದವರಿಗೂ ಕಡ್ಡಾಯಗೊಳಿಸಲಾಗಿದೆ. ಏಕೆಂದರೆ ಅವರು(ﷺ) ಅಂತ್ಯದಿನದವರೆಗಿನ ಜನರಿಗೆ ಮಾರ್ಗದರ್ಶಕರಾಗಿ, ಮಾದರಿಯಾಗಿ ಅಲ್ಲಾಹನಿಂದ ಕಳುಹಿಸಲ್ಪಟ್ಟವರು. ಅವರು ಅಲ್ಲಾಹನ ಗ್ರಂಥದ

**10 ಸಹೀಹ್ ಮುಸ್ಲಿಮ್** (2408)

ವ್ಯಾಖ್ಯಾನವನ್ನು ಕಾರ್ಯತಃ ತಿಳಿಸಿಕೊಡುವವರು. ಅವರ ಅನುಸರಣೆಯ ವಿನಾ ಓರ್ವ ಮುಸ್ಲಿಮನಿಗೆ ನಮಾಝಿನ ರಕ್‌ಅತ್‌ಗಳ ಸಂಖ್ಯೆಗಳೆಷ್ಟು, ನಮಾಝಿನಲ್ಲಿ ಕಡ್ಡಾಯವಾದ ವಿಷಯಗಳಾವುವು ಎಂಬುದನ್ನು ಸರಿಯಾಗಿ ತಿಳಿಯಲು ಸಾಧ್ಯವಿಲ್ಲ. ರಮದಾನಿನ ವ್ರತಾನುಷ್ಠಾನ, ಝಕಾತ್ (ಕಡ್ಡಾಯ ದಾನ), ಹಜ್ಜ್ ಮತ್ತು ಜಿಹಾದ್‌ಗಳ ಬಗ್ಗೆ ಇಸ್ಲಾಮಿನ ಅಧಿಕೃತ ನಿಯಮಗಳೇನೆಂದು ಅರಿಯಲು ಸಾಧ್ಯವಿಲ್ಲ. ಒಳಿತಿನ ಆದೇಶಗಳೇನು ಮತ್ತು ಕೆಡುಕನ್ನು ತಡೆಯುವ ವಿಧಾನಗಳಾವುವು ಎಂಬುದನ್ನು ಅರಿಯುವುದು ಸಾಧ್ಯವಿಲ್ಲ. ವ್ಯಾಪಾರ ವಹಿವಾಟುಗಳ ನಿಯಮಗಳು ಮತ್ತು ನಿಯಮೋಲ್ಲಂಘನೆ ಮಾಡಿದವನಿಗೆ ವಿಧಿಸಬೇಕಾದ ದಂಡನೆ, ಜುಲ್ಮಾನೆಗಳ ಬಗ್ಗೆ ಅರಿತುಕೊಳ್ಳುವುದು ಸಾಧ್ಯವಿಲ್ಲ.

ಪ್ರವಾದಿ(ﷺ)ರವರನ್ನು ಅನುಸರಿಸುವ ಬಗ್ಗೆ ಅತ್ಯುನ್ನತನಾದ ಅಲ್ಲಾಹನ ಆದೇಶಗಳು ಕುರ್‌ಆನ್‌ನಲ್ಲಿ ಹೀಗಿವೆ:

﴿ وَأَطِيعُواْ ٱللَّهَ وَٱلرَّسُولَ لَعَلَّكُمۡ تُرۡحَمُونَ ١٣٢ ﴾

**“ಅಲ್ಲಾಹುವನ್ನು ಮತ್ತು ಸಂದೇಶವಾಹಕರನ್ನು ಅನುಸರಿಸಿರಿ. ನಿಮಗೆ ಕರುಣೆ ಲಭ್ಯವಾಗಲೂಬಹುದು.”** (11)

4ನೇ ಅಧ್ಯಾಯ ಸೂರತುನ್ನಿಸಾಅ್‌ನ 59ನೇ ವಚನದಲ್ಲಿ ಅಲ್ಲಾಹು ಹೇಳುತ್ತಾನೆ:

﴿ يَٰٓأَيُّهَا ٱلَّذِينَ ءَامَنُوٓاْ أَطِيعُواْ ٱللَّهَ وَأَطِيعُواْ ٱلرَّسُولَ وَأُوْلِي ٱلۡأَمۡرِ مِنكُمۡۖ فَإِن تَنَٰزَعۡتُمۡ فِي شَيۡءٖ فَرُدُّوهُ إِلَى ٱللَّهِ وَٱلرَّسُولِ إِن كُنتُمۡ تُؤۡمِنُونَ بِٱللَّهِ وَٱلۡيَوۡمِ ٱلۡأٓخِرِۚ ذَٰلِكَ خَيۡرٞ وَأَحۡسَنُ تَأۡوِيلًا ٥٩ ﴾

**“ಓ ಸತ್ಯವಿಶ್ವಾಸಿಗಳೇ! ನೀವು ಅಲ್ಲಾಹುವನ್ನು ಅನುಸರಿಸಿರಿ. (ಅವನ) ಸಂದೇಶವಾಹಕರನ್ನೂ ನಿಮ್ಮಿಂದಲೇ ಇರುವ ಕಾರ್ಯನಿರ್ವಾಹಕರನ್ನೂ ಅನುಸರಿಸಿರಿ. ನೀವು ಅಲ್ಲಾಹುವಿನಲ್ಲಿ ಮತ್ತು ಅಂತ್ಯದಿನದಲ್ಲಿ ವಿಶ್ವಾಸವಿಡುವವರಾಗಿದ್ದರೆ ನಿಮ್ಮ ಮಧ್ಯೆ ಯಾವುದೇ ವಿಷಯದಲ್ಲಾದರೂ ಭಿನ್ನಾಭಿಪ್ರಾಯ ತಲೆದೋರಿದರೆ ನೀವದನ್ನು ಅಲ್ಲಾಹುವಿನೆಡೆಗೂ ಸಂದೇಶವಾಹಕರೆಡೆಗೂ ಮರಳಿಸಿರಿ. ಅದು**

11 ಕುರ್‌ಆನ್ 3:132

**ಅತ್ಯುತ್ತಮವಾದುದೂ ಅತಿಸೂಕ್ತ ಪರ್ಯಾವಸಾನವುಳ್ಳದ್ದೂ ಆಗಿದೆ.”** (12)

ಇದೇ ಅಧ್ಯಾಯದ 80ನೇ ವಚನದಲ್ಲಿ ಅಲ್ಲಾಹು ಹೇಳುತ್ತಾನೆ:

﴿مَّن يُطِعِ ٱلرَّسُولَ فَقَدۡ أَطَاعَ ٱللَّهَۖ وَمَن تَوَلَّىٰ فَمَآ أَرۡسَلۡنَٰكَ عَلَيۡهِمۡ حَفِيظٗا ٨٠﴾

**“(ಅಲ್ಲಾಹುವಿನ) ಸಂದೇಶವಾಹಕರನ್ನು ಯಾರು ಅನುಸರಿಸುವನೋ ಖಂಡಿತವಾಗಿಯೂ ಅವನು ಅಲ್ಲಾಹುವನ್ನು ಅನುಸರಿಸಿರುವನು. ಯಾರಾದರೂ ವಿಮುಖರಾಗುವುದಾದರೆ ತಮ್ಮನ್ನು ನಾವು ಅವರ ಮೇಲೆ ಕಾವಲುಗಾರನನ್ನಾಗಿ ಕಳುಹಿಸಿಲ್ಲ.”** (13)

ಸುನ್ನತ್ ಇಸ್ಲಾಮಿನ ಆಧಾರ ಪ್ರಮಾಣವಲ್ಲವೆಂದಾಗಿದ್ದಲ್ಲಿ ಅಥವಾ ಸುನ್ನತ್ ಸಂಪೂರ್ಣವಾಗಿ ಸಂರಕ್ಷಿಸಲ್ಪಟ್ಟಿಲ್ಲವೆಂದಾಗಿದ್ದಲ್ಲಿ ಮೇಲೆ ತಿಳಿಸಿದ ಸೂಕ್ತಿಯಲ್ಲಿ ಸೂಚಿಸಿದ ಸಂದೇಶವಾಹಕರನ್ನು ಅನುಸರಿಸಿರಿ, ಭಿನ್ನಾಭಿಪ್ರಾಯಗಳಿರುವ ವಿಷಯಗಳನ್ನು ಅಲ್ಲಾಹು ಮತ್ತು ರಸೂಲರ ಕಡೆಗೆ ತಿರುಗಿಸಿರಿ ಎಂಬ ಕುರ್‌ಆನ್‌ನ ಆದೇಶಕ್ಕೆ ಯಾವ ಅರ್ಥವಿದೆ? ಅಥವಾ ಸುನ್ನತ್ ಇಸ್ಲಾಮಿನ ಆಧಾರ ಪ್ರಮಾಣವಲ್ಲವೆಂದಾದಲ್ಲಿ ಅಸ್ತಿತ್ವದಲ್ಲೇ ಇರದ ಒಂದು ವಿಷಯವನ್ನು ಅನುಸರಿಸಲು ಅಲ್ಲಾಹು ತನ್ನ ದಾಸರಿಗೆ ಆದೇಶ ನೀಡಿದ್ದಾನೆಂಬ ತಪ್ಪು ತೀರ್ಮಾನಕ್ಕೆ ಬರಬೇಕಾಗುವುದು. ಇದು ಅಲ್ಲಾಹನ ಮೇಲೆ ಹೊರಿಸುವ ಅತ್ಯಂತ ಘೋರವಾದ ಸುಳ್ಳಾರೋಪವಾಗಿದೆ. ಇದು ಕುಫ್ರ್ (ಅವಿಶ್ವಾಸ) ಅಲ್ಲದೆ ಇನ್ನೇನೂ ಅಲ್ಲ.

16ನೇ ಅಧ್ಯಾಯ ಸೂರತು ನ್ನಹ್ಲ್‌ನ 44ನೇ ಸೂಕ್ತಿಯಲ್ಲಿ ಅಲ್ಲಾಹು ಹೇಳುತ್ತಾನೆ:

﴿وَأَنزَلۡنَآ إِلَيۡكَ ٱلذِّكۡرَ لِتُبَيِّنَ لِلنَّاسِ مَا نُزِّلَ إِلَيۡهِمۡ وَلَعَلَّهُمۡ يَتَفَكَّرُونَ ٤٤﴾

**“ಜನರಿಗೆ ಅವತೀರ್ಣಗೊಂಡಿರುವುದನ್ನು ತಾವು ಅವರಿಗೆ ವಿವರಿಸಿಕೊಡುವ ಸಲುವಾಗಿ ಮತ್ತು ಅವರು ಚಿಂತಿಸಿ ಗ್ರಹಿಸುವುದಕ್ಕಾಗಿ ತಮಗೆ ನಾವು ಸಂದೇಶವನ್ನು ಅವತೀರ್ಣಗೊಳಿಸಿದೆವು.”** (14)

---

12 **ಕುರ್‌ಆನ್** 4:59

13 **ಕುರ್‌ಆನ್** 4:80

14 **ಕುರ್‌ಆನ್** 16:44

ಇದೇ ಅಧ್ಯಾಯದ 64ನೇ ಸೂಕ್ತಿಯಲ್ಲಿ ಅಲ್ಲಾಹು ಹೇಳುತ್ತಾನೆ:

﴿ وَمَآ أَنزَلۡنَا عَلَيۡكَ ٱلۡكِتَٰبَ إِلَّا لِتُبَيِّنَ لَهُمُ ٱلَّذِي ٱخۡتَلَفُواْ فِيهِ وَهُدٗى وَرَحۡمَةٗ لِّقَوۡمٖ يُؤۡمِنُونَ ٦٤ ﴾

**“ಯಾವ ವಿಷಯದಲ್ಲಿ ಅವರು ಭಿನ್ನರಾಗಿರುವರೋ ಅದನ್ನು ಅವರಿಗೆ ಸ್ಪಷ್ಟಗೊಳಿಸುವ ಸಲುವಾಗಿ ಮತ್ತು ವಿಶ್ವಾಸವಿಡುವ ಜನರಿಗೆ ಮಾರ್ಗದರ್ಶಿಯಾಗಿ ಹಾಗೂ ಕಾರುಣ್ಯವಾಗಿ ವಿನಾ ತಮಗೆ ನಾವು ಗ್ರಂಥವನ್ನು ಅವತೀರ್ಣಗೊಳಿಸಿಲ್ಲ.”** **(15)**

ಸುನ್ನತ್ ಆಧಾರ ಪ್ರಮಾಣವಲ್ಲ ಅಥವಾ ಸಂರಕ್ಷಿಸಲ್ಪಟ್ಟಿಲ್ಲವೆಂದಾಗಿದ್ದಲ್ಲಿ ಅಲ್ಲಾಹು ತನ್ನ ಸಂದೇಶವಾಹಕರಾದ ಪ್ರವಾದಿ ಮುಹಮ್ಮದ್(ﷺ)ರಿಗೆ ಅವತೀರ್ಣಗೊಳಿಸಿ ಕೊಟ್ಟಿರುವುದನ್ನು ಅವರಿಗೆ ವಿಶದೀಕರಿಸಿ ಮನದಟ್ಟು ಮಾಡುವ ಹೊಣೆಗಾರಿಕೆಯನ್ನು ವಹಿಸಿಕೊಡಲು ಹೇಗೆ ತಾನೇ ಸಾಧ್ಯ?

ಇದೇ ರೀತಿ ಸೂರತುನ್ನೂರ್‌ನ 54ನೇ ಸೂಕ್ತಿಯಲ್ಲಿ ಅಲ್ಲಾಹು ಹೇಳುತ್ತಾನೆ:

﴿ قُلۡ أَطِيعُواْ ٱللَّهَ وَأَطِيعُواْ ٱلرَّسُولَۖ فَإِن تَوَلَّوۡاْ فَإِنَّمَا عَلَيۡهِ مَا حُمِّلَ وَعَلَيۡكُم مَّا حُمِّلۡتُمۡۖ وَإِن تُطِيعُوهُ تَهۡتَدُواْۚ وَمَا عَلَى ٱلرَّسُولِ إِلَّا ٱلۡبَلَٰغُ ٱلۡمُبِينُ ٥٤ ﴾

**“ಹೇಳಿರಿ: ‘ನೀವು ಅಲ್ಲಾಹುವನ್ನು ಅನುಸರಿಸಿರಿ ಮತ್ತು ಸಂದೇಶವಾಹಕರನ್ನು ಅನುಸರಿಸಿರಿ’. ನೀವು ವಿಮುಖರಾಗುವುದಾದರೆ ಅವರ (ಪ್ರವಾದಿಯವರ) ಹೊಣೆಯು ಅವರಿಗೆ ವಹಿಸಿಕೊಡಲಾದ ವಿಷಯದಲ್ಲಿ ಮಾತ್ರವಾಗಿದೆ. ನಿಮ್ಮ ಹೊಣೆಯು ನಿಮಗೆ ವಹಿಸಿ ಕೊಡಲಾದ ವಿಷಯಗಳಲ್ಲಾಗಿದೆ. ನೀವು ಅವರನ್ನು ಅನುಸರಿಸುವುದಾದರೆ ನೀವು ಸನ್ಮಾರ್ಗವನ್ನು ಪಡೆಯುವಿರಿ. ಸಂದೇಶವಾಹಕರ ಹೊಣೆಯು (ಸಂದೇಶವನ್ನು) ಸ್ಪಷ್ಟವಾಗಿ ತಲುಪಿಸಿಕೊಡುವುದು ಮಾತ್ರವಾಗಿದೆ.”** **(16)**

**15** **ಕುರ್‌ಆನ್** 16:64

**16** **ಕುರ್‌ಆನ್** 24:54

ಇದೇ ಅಧ್ಯಾಯದ 56ನೇ ಸೂಕ್ತಿಯಲ್ಲಿ ಅಲ್ಲಾಹು ಹೇಳುತ್ತಾನೆ:

﴿وَأَقِيمُواْ ٱلصَّلَوٰةَ وَءَاتُواْ ٱلزَّكَوٰةَ وَأَطِيعُواْ ٱلرَّسُولَ لَعَلَّكُمۡ تُرۡحَمُونَ ٥٦﴾

**"ನೀವು ನಮಾಝನ್ನು ಸಂಸ್ಥಾಪಿಸಿರಿ, ಝಕಾತ್ ನೀಡಿರಿ ಮತ್ತು ಸಂದೇಶವಾಹಕರನ್ನು ಅನುಸರಿಸಿರಿ. ನಿಮಗೆ ಕರುಣೆ ಸಿಗಲೂಬಹುದು."** (17)

7ನೇ ಅಧ್ಯಾಯ ಸೂರತುಲ್ ಅಲ್‌ರಾಫ್‌ನ 158ನೇ ಸೂಕ್ತಿಯಲ್ಲಿ ಅಲ್ಲಾಹು ಹೇಳುತ್ತಾನೆ:

﴿قُلۡ يَـٰٓأَيُّهَا ٱلنَّاسُ إِنِّي رَسُولُ ٱللَّهِ إِلَيۡكُمۡ جَمِيعًا ٱلَّذِي لَهُۥ مُلۡكُ ٱلسَّمَٰوَٰتِ وَٱلۡأَرۡضِۖ لَآ إِلَٰهَ إِلَّا هُوَ يُحۡيِۦ وَيُمِيتُۖ فَـَٔامِنُواْ بِٱللَّهِ وَرَسُولِهِ ٱلنَّبِيِّ ٱلۡأُمِّيِّ ٱلَّذِي يُؤۡمِنُ بِٱللَّهِ وَكَلِمَٰتِهِۦ وَٱتَّبِعُوهُ لَعَلَّكُمۡ تَهۡتَدُونَ ١٥٨﴾

**"ಹೇಳಿರಿ: 'ಓ ಮನುಷ್ಯರೇ! ಖಂಡಿತವಾಗಿಯೂ ನಾನು ನಿಮ್ಮೆಲ್ಲರೆಡೆಗೆ (ಕಳುಹಿಸಲಾಗಿರುವ) ಅಲ್ಲಾಹುವಿನ ಸಂದೇಶವಾಹಕನಾಗಿರುವೆನು. ಆಕಾಶಗಳ ಮತ್ತು ಭೂಮಿಯ ಆಧಿಪತ್ಯವು ಯಾರಿಗಾಗಿದೆಯೋ ಅವನ (ಸಂದೇಶವಾಹಕನು). ಅವನ ಹೊರತು ಅನ್ಯ ಆರಾಧ್ಯರಿಲ್ಲ. ಅವನು ಜೀವವನ್ನು ನೀಡುವವನೂ ಮೃತಪಡಿಸುವವನೂ ಆಗಿರುವನು. ಆದ್ದರಿಂದ ನೀವು ಅಲ್ಲಾಹುವಿನಲ್ಲೂ, ಅವನ ಸಂದೇಶವಾಹಕರಲ್ಲೂ, ಅಂದರೆ ಅಲ್ಲಾಹುವಿನಲ್ಲಿ ಮತ್ತು ಅವನ ಸೂಕ್ತಿಗಳಲ್ಲಿ ವಿಶ್ವಾಸವಿಡುವ ನಿರಕ್ಷರಿಯಾದ ಆ ಪ್ರವಾದಿಯಲ್ಲೂ ವಿಶ್ವಾಸವಿರಿಸಿರಿ ಮತ್ತು ಅವರನ್ನು ಅನುಸರಿಸಿರಿ. ನೀವು ಸನ್ಮಾರ್ಗವನ್ನು ಪಡೆಯಲೂಬಹುದು."** (18)

ಮಾರ್ಗದರ್ಶನ (ಹಿದಾಯಃ) ಮತ್ತು ದಯೆ (ರಹ್ಮಃ) ಇರುವುದು ಪ್ರವಾದಿ (ﷺ)ರವರ ಅನುಸರಣೆಯಲ್ಲಿ ಎಂಬುದನ್ನು ಇವೆರಡು ಸೂಕ್ತಿಗಳು ನಿಸ್ಸಂದೇಹವಾಗಿ ಸಾಬೀತುಪಡಿಸುತ್ತವೆ.

---

**17** ಕುರ್‌ಆನ್ 24:56

**18** ಕುರ್‌ಆನ್ 7:158

ವಾಸ್ತವಿಕತೆಯು ಹೀಗಿರುವಾಗ ಸುನ್ನತ್‌ನ ಅನುಸರಣೆಯು ಕಡ್ಡಾಯವಲ್ಲ, ಸುನ್ನತ್ ಯಾವುದೂ ಅಧಿಕೃತವಲ್ಲ, ವಿಶ್ವಾಸಾರ್ಹವಲ್ಲ, ಸಂರಕ್ಷಿಸಲ್ಪಟ್ಟಿಲ್ಲ, ಅವುಗಳನ್ನು ಅವಲಂಬಿಸಬೇಕಾಗಿಲ್ಲ ಎಂಬ ವಾದವೇ ಹುರುಳಿಲ್ಲದ್ದು.

ಅಲ್ಲಾಹು ಹೇಳುತ್ತಾನೆ:

﴿ فَلْيَحْذَرِ ٱلَّذِينَ يُخَالِفُونَ عَنْ أَمْرِهِۦٓ أَن تُصِيبَهُمْ فِتْنَةٌ أَوْ يُصِيبَهُمْ عَذَابٌ أَلِيمٌ ٦٣ ﴾

**“ಆದ್ದರಿಂದ ಪ್ರವಾದಿಯವರ ಆಜ್ಞೆಗೆ ವಿರೋಧವಾಗಿ ಸಾಗುವವರು ತಮಗೇನಾದರೂ ಆಪತ್ತು ತಗಲುವುದರ ಬಗ್ಗೆ ಅಥವಾ ಯಾತನಾಮಯ ಶಿಕ್ಷೆ ತಗಲುವುದರ ಬಗ್ಗೆ ಭಯಪಡಲಿ.”** [19]

ಸೂರತುಲ್ ಹಶ್ರ್‌ನಲ್ಲಿ ಅಲ್ಲಾಹು ಹೇಳುತ್ತಾನೆ:

﴿ وَمَآ ءَاتَىٰكُمُ ٱلرَّسُولُ فَخُذُوهُ وَمَا نَهَىٰكُمْ عَنْهُ فَٱنتَهُوا۟ ﴾

**“ಸಂದೇಶವಾಹಕರು ನಿಮಗೆ ಏನನ್ನು ನೀಡುವರೋ ಅದನ್ನು ಸ್ವೀಕರಿಸಿರಿ ಮತ್ತು ಅವರು ನಿಮ್ಮನ್ನು ಯಾವುದರಿಂದ ವಿರೋಧಿಸುವರೋ ಅದರಿಂದ ದೂರಸರಿಯಿರಿ.”** [20]

ಇದೇ ಅರ್ಥ ನೀಡುವಂತಹ ಹಲವಾರು ಸೂಕ್ತಿಗಳು ಕುರ್‌ಆನಿನಲ್ಲಿವೆ. ಎಲ್ಲವೂ ಪ್ರವಾದಿ(ﷺ)ರವರ ಅನುಸರಣೆ ಹಾಗೂ ಅವರು ಆದೇಶ ನೀಡಿದವುಗಳೆಲ್ಲದರ ಸ್ವೀಕಾರವನ್ನು ಕಡ್ಡಾಯಗೊಳಿಸುತ್ತದೆ. ಆದುದರಿಂದ ಅಲ್ಲಾಹನ ಗ್ರಂಥವಾದ ಕುರ್‌ಆನ್ ಮತ್ತು ಅವನ ಸಂದೇಶವಾಹಕರಾದ ಮುಹಮ್ಮದ್(ﷺ)ರವರ ಚರ್ಯೆಗಳ ಅನುಸರಣೆಯೆಂಬುದು ಪರಸ್ಪರ ಬೇರ್ಪಡಿಸಲಾಗದ ಎರಡು ಮೂಲಭೂತ ಆಧಾರ ಪ್ರಮಾಣಗಳಾಗಿವೆ. ಇದರ ಪೈಕಿ ಒಂದನ್ನು ಯಾರಾದರೂ ತಿರಸ್ಕರಿಸಿದರೆ ಅವನು ಇನ್ನೊಂದನ್ನು ತಿರಸ್ಕರಿಸಿದನು ಎಂದರ್ಥ. ಇದು ಪಥಭ್ರಷ್ಟತೆ ಮತ್ತು ಕುಫ್ರ್ (ಅವಿಶ್ವಾಸ) ಆಗಿದೆ. ಇದು ಅವನನ್ನು ಇಸ್ಲಾಮಿನ ವೃತ್ತದಿಂದ ಹೊರತಳ್ಳುವುದು ಎಂಬುದು

---

**19 ಕುರ್‌ಆನ್** 24:63

**20 ಕುರ್‌ಆನ್** 59:7

ವಿದ್ವಾಂಸರ ಇಜ್ಮಾಅ್ (ಒಮ್ಮತಾಭಿಪ್ರಾಯ) ಆಗಿದೆ.

ಇನ್ನು ಅಲ್ಲಾಹನ ಸಂದೇಶವಾಹಕರಾದ ಮುಹಮ್ಮದ್(ﷺ)ರವರ ಹದೀಸ್‌ಗಳು ಅವರ ಅನುಸರಣೆಯನ್ನು ಮತ್ತು ಅವರು ಆದೇಶಿಸಿದ್ದನ್ನು ಸ್ವೀಕರಿಸುವುದನ್ನು ಕಡ್ಡಾಯಗೊಳಿಸುತ್ತದೆ ಹಾಗೂ ಅವರಿಗೆ ಅವಿಧೇಯತೆ ತೋರುವುದನ್ನು ನಿಷೇಧಿಸುತ್ತವೆ. ಇದು ಅವರ ಕಾಲದ ಅನುಯಾಯಿಗಳಿಗೂ, ಅವರ ನಂತರ ಬರುವ ಲೋಕಾಂತ್ಯದವರೆಗಿನ ಸರ್ವ ಮಾನವರಿಗೂ ಅನ್ವಯವಾಗುವುದು.

ಅಬೂ ಹುರೈರಾ(رضي الله عنه)ರವರು ವರದಿ ಮಾಡಿದ ಈ ಕೆಳಗಿನ ಹದೀಸ್‌ಗಳಲ್ಲಿ ಪ್ರಸ್ತುತ ವಿಷಯವನ್ನು ಪ್ರಸ್ತಾಪಿಸಲಾಗಿದೆ.

«مَنْ أَطَاعَنِي فَقَدْ أَطَاعَ اللَّهَ، وَمَنْ عَصَانِي فَقَدْ عَصَى اللَّهَ»

**“ಯಾರು ನನ್ನನ್ನು ಅನುಸರಿಸಿದನೋ ಅವನು ಖಂಡಿತವಾಗಿಯೂ ಅಲ್ಲಾಹನನ್ನು ಅನುಸರಿಸಿದನು. ಮತ್ತು ಯಾರು ನನಗೆ ಅವಿಧೇಯತೆ ತೋರಿದನೋ ಖಂಡಿತವಾಗಿಯೂ ಅವನು ಅಲ್ಲಾಹನಿಗೆ ಅವಿಧೇಯತೆ ತೋರಿದನು.”** (21)

ಅಬೂ ಹುರೈರಾ(رضي الله عنه)ರವರು ವರದಿ ಮಾಡಿದ ಇನ್ನೊಂದು ವಚನದಲ್ಲಿ ಹೀಗಿದೆ:

«كُلُّ أُمَّتِي يَدْخُلُونَ الْجَنَّةَ إِلَّا مَنْ أَبَى» قِيلَ: يَا رَسُولَ اللَّهِ، وَمَنْ يَأْبَى؟ قَالَ: «مَنْ أَطَاعَنِي دَخَلَ الْجَنَّةَ وَمَنْ عَصَانِي فَقَدْ أَبَى»

**“ನನ್ನ ಸಮುದಾಯದಲ್ಲಿ ಎಲ್ಲರೂ ಸ್ವರ್ಗವನ್ನು ಪ್ರವೇಶಿಸುವರು. ನಿರಾಕರಿಸಿದವನ ಹೊರತು. ಆಗ ಕೇಳಲಾಯಿತು. ಓ ಅಲ್ಲಾಹನ ಸಂದೇಶವಾಹಕರೇ, ನಿರಾಕರಿಸುವವನು ಯಾರು? ಅವರು ಹೇಳಿದರು: ಯಾರು ನನ್ನನ್ನು ಅನುಸರಿಸಿದನೋ ಅವನು ಸ್ವರ್ಗವನ್ನು ಪ್ರವೇಶಿಸಿದನು ಮತ್ತು ಯಾರು ನನಗೆ ಅವಿಧೇಯತೆ ತೋರಿದನೋ ಅವನು ನಿರಾಕರಿಸಿದನು.”** (22)

ಅಹ್ಮದ್, ಅಬೂದಾವೂದ್ ಮತ್ತು ಅಲ್‌ಹಾಕಿಮ್ ವಿಶ್ವಾಸಾರ್ಹ ವರದಿಗಾರರ

**21** ಸಹೀಹುಲ್ ಬುಖಾರಿ (6718), ಸಹೀಹ್ ಮುಸ್ಲಿಮ್ (1835), ಸುನನು ನ್ನಸಾಈ (5510), ಸುನನ್ ಇಬ್ನ್ ಮಾಜ (2859), ಮುಸ್ನದ್ ಅಹ್ಮದ್ ಇಬ್ನ್ ಹಂಬಲ್ (2/387)

**22** ಸಹೀಹುಲ್ ಬುಖಾರಿ (6851), ಸಹೀಹ್ ಮುಸ್ಲಿಮ್ (1835), ಮುಸ್ನದ್ ಅಹ್ಮದ್ ಇಬ್ನ್ ಹಂಬಲ್ (2/361)

ಸರಣಿಯೊಂದಿಗೆ ಅಲ್‌ಮಿಕ್ದಾಮ್ ಇಬ್ನ್ ಮಅ್‌ದೀ ಕರಿಬ್(رضي الله عنه)ರವರಿಂದ, ಅವರು ಪ್ರವಾದಿ(ﷺ)ರವರಿಂದ ವರದಿ ಮಾಡುತ್ತಾರೆ:

«أَلَا إِنِّي أُوتِيتُ الْكِتَابَ وَمِثْلَهُ مَعَهُ، أَلَا يُوشِكُ رَجُلٌ شَبْعَانُ عَلَى أَرِيكَتِهِ يَقُولُ: عَلَيْكُمْ بِهَذَا الْقُرْآنِ فَمَا وَجَدْتُمْ فِيهِ مِنْ حَلَالٍ فَأَحِلُّوهُ وَمَا وَجَدْتُمْ فِيهِ مِنْ حَرَامٍ فَحَرِّمُوهُ»

**"ತಿಳಿಯಿರಿ, ಖಂಡಿತವಾಗಿಯೂ ನನಗೆ ಕುರ್‌ಆನನ್ನು ಮತ್ತು ಅದರೊಂದಿಗೆ ಅದರಂತಿರುವುದನ್ನೂ ನೀಡಲಾಗಿದೆ. ಒಬ್ಬನು ತನ್ನ ಆರಾಮ ಕುರ್ಚಿಯಲ್ಲಿ ಆಸೀನನಾಗಿರುತ್ತಾ, ಈ ಕುರ್‌ಆನಿಗೆ ಮಾತ್ರ ಅಂಟಿಕೊಂಡಿರಿ, ಯಾವುದೆಲ್ಲ ಧರ್ಮಸಮ್ಮತವೆಂದು ಅದರಲ್ಲಿ ಕಾಣುತ್ತೀರೋ ಅದನ್ನು ಧರ್ಮಸಮ್ಮತವೆಂದು ಪರಿಗಣಿಸಿರಿ ಮತ್ತು ಯಾವುದೆಲ್ಲ ನಿಷಿದ್ಧವೆಂದು ಅದರಲ್ಲಿ ಕಾಣುತ್ತೀರೋ ಅದನ್ನು ನಿಷಿದ್ಧವೆಂದು ಪರಿಗಣಿಸಿರಿ ಎಂದು ಹೇಳುವ ಕಾಲವೊಂದು ಬರಲಿರುವ ಬಗ್ಗೆ ಜಾಗರೂಕರಾಗಿರಿ."** [23]

ಅಬೂದಾವೂದ್ ಮತ್ತು ಇಬ್ನ್ ಮಾಜ ಅಧಿಕೃತ ವರದಿಗಾರರ ಸರಣಿಯೊಂದಿಗೆ ಇಬ್ನ್ ಅಬೀ ರಾಫಿಅ್(رضي الله عنه)ರವರು ತಮ್ಮ ತಂದೆಯಿಂದ ಪ್ರವಾದಿ(ﷺ)ರವರು ಹೇಳಿದ್ದಾಗಿ ವರದಿ ಮಾಡುತ್ತಾರೆ:

«لَا أُلْفِيَنَّ أَحَدَكُمْ مُتَّكِئًا عَلَى أَرِيكَتِهِ يَأْتِيهِ الْأَمْرُ مِنْ أَمْرِي مِمَّا أَمَرْتُ بِهِ أَوْ نَهَيْتُ عَنْهُ فَيَقُولُ لَا نَدْرِي، مَا وَجَدْنَا فِي كِتَابِ اللَّهِ اتَّبَعْنَاهُ»

**"ನಿಮ್ಮಲ್ಲೊಬ್ಬನು ಅವನ ಆರಾಮ ಕುರ್ಚಿಯಲ್ಲಿ ಆಸೀನನಾಗಿದ್ದುಕೊಂಡು ನಾನು ಆದೇಶಿಸಿದ ಅಥವಾ ನಿಷಿದ್ಧಗೊಳಿಸಿದ ಯಾವುದಾದರೊಂದು ವಿಷಯದ ಪ್ರಸ್ತಾಪವು ಅವನಲ್ಲಿಗೆ ಬಂದಾಗ, ನಮಗೆ ಅದರ ಜ್ಞಾನವಿಲ್ಲ, ನಾವು ಅಲ್ಲಾಹನ ಗ್ರಂಥದಲ್ಲೇನಿರುವುದೋ ಅದನ್ನು ಮಾತ್ರ ಅನುಸರಿಸುವೆವು ಎನ್ನುವ ಪ್ರಸಂಗವನ್ನು ತರಬೇಡಿರಿ."** [24]

---

**23** ಸುನನ್ ಅಬೀ ದಾವೂದ್ (4604)

**24** ಸುನನು ತ್ತಿರ್ಮಿದಿ (2663), ಸುನನ್ ಅಬೀ ದಾವೂದ್ (4605), ಸುನನ್ ಇಬ್ನ್ ಮಾಜ (13), ಮುಸ್ನದ್ ಅಹ್ಮದ್ ಇಬ್ನ್ ಹಂಬಲ್ (6/8)

ಅಲ್‌ಹಸನ್ ಇಬ್ನ್ ಜಾಬಿರ್(ؓ)ರವರು ಅಲ್‌ಮಿಕ್ದಾಮ್ ಇಬ್ನ್ ಮಅ್‌ದೀ ಕರಿಬ್ (ؓ)ರಿಂದ ಆಲಿಸಿರುವುದಾಗಿ ವರದಿ ಮಾಡುತ್ತಾರೆ:

حَرَّمَ رَسُولُ اللَّهِ صَلَّى اللَّهُ عَلَيْهِ وَسَلَّمَ يَوْمَ خَيْبَرَ أَشْيَاءَ، ثُمَّ قَالَ: «يُوشِكُ أَحَدُكُمْ أَنْ يُكَذِّبَنِي وَهُوَ مُتَّكِئٌ يُحَدِّثُ بِحَدِيثِي فَيَقُولُ: بَيْنَنَا وَبَيْنَكُمْ كِتَابُ اللَّهِ، فَمَا وَجَدْنَا فِيهِ مِنْ حَلَالٍ اسْتَحْلَلْنَاهُ، وَمَا وَجَدْنَا فِيهِ مِنْ حَرَامٍ حَرَّمْنَاهُ، أَلَا إِنَّ مَا حَرَّمَ رَسُولُ اللَّهِ مِثْلُ مَا حَرَّمَ اللَّهُ»

**“ಅಲ್ಲಾಹನ ಸಂದೇಶವಾಹಕರು(ﷺ) ಖೈಬರ್‌ನ ದಿನದಂದು ಕೆಲವು ವಸ್ತುಗಳನ್ನು ನಿಷಿದ್ಧಗೊಳಿಸುತ್ತಾ ಹೇಳಿದರು: ಕಾಲವೊಂದು ಬರಲಿದೆ. ಆಗ ನಿಮ್ಮಲ್ಲೊಬ್ಬನು ಅವನ ಆರಾಮ ಕುರ್ಚಿಯಲ್ಲಿ ಅಸೀನನಾಗಿರುತ್ತಾನೆ. ನನ್ನ ವಚನವೊಂದನ್ನು ಅವನಿಗೆ ತಿಳಿಸಲಾಗುತ್ತದೆ. ಆದರೆ ಅವನು ಅದರಲ್ಲಿ ವಿಶ್ವಾಸವಿಡಲಾರನು. ಅವನು ಹೇಳುವನು: ‘ನಮ್ಮ ಮುಂದೆ ಇರುವುದು ಅಲ್ಲಾಹನ ಗ್ರಂಥ. ಆದುದರಿಂದ ಅದರಲ್ಲಿ ಸಮ್ಮತವೆಂದು ಯಾವುದನ್ನು ಹೇಳಲಾಗಿದೆಯೋ ಅದನ್ನು ಸಮ್ಮತವೆಂದು ಪರಿಗಣಿಸೋಣ. ಮತ್ತು ಅದರಲ್ಲಿ ನಿಷಿದ್ಧವೆಂದಿರುವುದನ್ನು ನಿಷಿದ್ಧವೆಂದು ಪರಿಗಣಿಸೋಣ.’ ಆದರೆ ಅಲ್ಲಾಹನ ಸಂದೇಶವಾಹಕರು ಯಾವುದನ್ನು ನಿಷಿದ್ಧವೆಂದು ಘೋಷಿಸಿದರೋ ಖಂಡಿತವಾಗಿಯೂ ಅದು ಅಲ್ಲಾಹು ನಿಷಿದ್ಧಗೊಳಿಸಿದಂತೆಯೇ ಆಗಿದೆ.”** [25]

ಈ ಹದೀಸ್ ಅಲ್‌ಹಾಕಿಮ್, ಅತ್ತಿರ್ಮಿದೀ ಮತ್ತು ಇಬ್ನ್ ಮಾಜರಿಂದ ವಿಶ್ವಾಸಾರ್ಹ ವರದಿಗಾರರ ಸರಣಿಯ ಮೂಲಕ ವರದಿಯಾಗಿದೆ.

ಪ್ರವಾದಿ(ﷺ)ರವರು ತಮ್ಮ ಸಹಚರರಿಗೆ ಪ್ರವಚನ ನೀಡುತ್ತಿದ್ದ ಸಂದರ್ಭಗಳಲ್ಲಿ ಹಾಜರಿದ್ದವರು ಹಾಜರಿಲ್ಲದವರಿಗೆ ಈ ಸಂದೇಶವನ್ನು ತಲುಪಿಸಬೇಕೆಂದು ತಾಕೀತು ಮಾಡುತ್ತಿದ್ದರೆಂದು ಮುತವಾತಿರ್ ಆಗಿ ವರದಿಯಾಗಿದೆ. ಅವರು(ﷺ) ಹೇಳುತ್ತಿದ್ದರು:

«رُبَّ مُبَلَّغٍ أَوْعَى مِنْ سَامِعٍ»

**“ಕೆಲವು ಸಲ ಸಂದೇಶ ತಲುಪಿದವನು ಅದನ್ನು ಆಲಿಸಿದವನಿಗಿಂತ ಚೆನ್ನಾಗಿ**

25 ಮುಸ್ನದ್ ಅಹ್ಮದ್ ಇಬ್ನ್ ಹಂಬಲ್ (4/132), ಸುನನು ದ್ದಾರಿಮೀ (586)

**ಗ್ರಹಿಸಿಕೊಳ್ಳಬಹುದು."** (26)

ಇನ್ನು ಮುತ್ತಫಕುನ್ ಅಲೈಹಿಯಾಗಿ ದಾಖಲಿಸಲ್ಪಟ್ಟ ಅಧಿಕೃತ ಹದೀಸಿನಲ್ಲಿ ಪ್ರವಾದಿ (ﷺ)ರವರು ಹಜ್ ಕರ್ಮದ ಅರಫಾ ದಿನದಂದು ಜನರನ್ನು ಅಭಿಸಂಬೋಧಿಸಿ ನಡೆಸಿದ ಪ್ರವಚನವೊಂದರಲ್ಲಿ ಹೀಗಿದೆ:

«فَلْيُبَلِّغِ الشَّاهِدُ الْغَائِبَ، فَرُبَّ مَنْ يُبَلَّغُهُ أَوْعَى لَهُ مِمَّنْ سَمِعَهُ»

**"ಇಲ್ಲಿ ಹಾಜರಿದ್ದವನು ಹಾಜರಿಲ್ಲದವನಿಗೆ ಈ ಸಂದೇಶವನ್ನು ತಲುಪಿಸಲಿ. ಸಂದೇಶ ತಲುಪಿಸಲ್ಪಟ್ಟವನು ಅದನ್ನು ಆಲಿಸಿದವನಿಗಿಂತ ಚೆನ್ನಾಗಿ ಗ್ರಹಿಸಿಕೊಳ್ಳಲೂ ಬಹುದು."** (27)

ಸುನ್ನತ್ ಇಸ್ಲಾಮಿನ ಆಧಾರ ಪ್ರಮಾಣವಲ್ಲವೆಂದಾಗಿದ್ದಲ್ಲಿ ಹಾಗೂ ಅಂತ್ಯದಿನದವರೆಗೂ ಸಂರಕ್ಷಿಸಲ್ಪಡುವವುಗಳಲ್ಲವೆಂದಾದಲ್ಲಿ ಪ್ರವಾದಿ(ﷺ)ರವರು ಖಂಡಿತವಾಗಿಯೂ ಅದನ್ನು ಇತರರಿಗೆ ತಲುಪಿಸುವ ಆದೇಶವನ್ನು ನೀಡುತ್ತಿರಲಿಲ್ಲ. ಆದುದರಿಂದ ಆಧಾರ ಪ್ರಮಾಣವು ನಿಸ್ಸಂಶಯವಾಗಿಯೂ ಸುನ್ನತ್‌ನ ಮೂಲಕವೇ ಸ್ಥಾಪಿಸಲ್ಪಡಬೇಕಾಗಿದೆ.

ಅರ್ಥಾತ್ ಪ್ರವಾದಿ(ﷺ)ರವರನ್ನು ನೇರವಾಗಿ ಕಂಡ ಮತ್ತು ಅವರ ನಡೆನುಡಿಗಳನ್ನು ಅರಿತುಕೊಂಡ ಸಹಾಬಿಗಳು ಮತ್ತು ಸಹಾಬಿಗಳಿಂದ ಅವುಗಳನ್ನು ಆಲಿಸಿ ನಮಗೆ ತಲುಪಿಸಿದ ವಿಶ್ವಾಸಾರ್ಹ ಸನದ್‌ನ ಮೇಲೆ ಆಧಾರ ಪ್ರಮಾಣಗಳು ಸ್ಥಾಪಿಸಲ್ಪಟ್ಟಿವೆ.

ಆದುದರಿಂದ ಪ್ರವಾದಿ(ﷺ)ರವರ ನಡೆನುಡಿಗಳನ್ನು ಅವರ ಸಹವರ್ತಿಗಳು ಸಂರಕ್ಷಿಸಿದ್ದರು. ಅದನ್ನು ತಮ್ಮ ನಂತರದ ತಲೆಮಾರಿಗೆ (ತಾಬಿಊನ್) ತಲುಪಿಸಿದರು. ತಾಬಿಊನ್‌ಗಳು ಅದನ್ನು ತಮ್ಮ ನಂತರದ ಪೀಳಿಗೆಗೆ ದಾಟಿಸಿದರು. ತದನಂತರದ ಧರ್ಮಿಷ್ಠ ಉಲಮಾಗಳು ಅದನ್ನು ಪೀಳಿಗೆಯಿಂದ ಪೀಳಿಗೆಗೆ ಕೈದಾಟಿಸಿಕೊಂಡು ಬಂದರು. ಅದನ್ನು ತಮ್ಮ ಗ್ರಂಥಗಳಲ್ಲಿ ದಾಖಲಿಸಿಟ್ಟರು. ಅವುಗಳಲ್ಲಿ ಅನಧಿಕೃತವಾಗಿ ನುಸುಳಿಕೊಂಡು ಬಂದವುಗಳನ್ನು ಗುರುತಿಸಿ ಪ್ರತ್ಯೇಕಿಸಿದರು. ಅಧಿಕೃತ ಮತ್ತು ಅನಧಿಕೃತ ವರದಿಗಳನ್ನು ಗುರುತಿಸಿಕೊಳ್ಳುವ ಸಲುವಾಗಿ ನಿಯಮಗಳನ್ನು ರಚಿಸಿದರು. ಸುನ್ನತ್ತನ್ನು ಪೀಳಿಗೆಯಿಂದ ಪೀಳಿಗೆಗೆ ದಾಟಿಸುವ ಕಾರ್ಯದಲ್ಲಿ ಭಾಗಿಯಾದ ವರದಿಗಾರರ

---

**26 ಸುನನು ತ್ತಿರ್ಮಿದಿ** (2657), **ಸುನನ್ ಇಬ್ನ್ ಮಾಜ** (232)

**27 ಸಹೀಹುಲ್ ಬುಖಾರಿ** (6667), **ಸುನನ್ ಇಬ್ನ್ ಮಾಜ** (233), **ಮುಸ್ನದ್ ಅಹ್ಮದ್ ಇಬ್ನ್ ಹಂಬಲ್** (5/37)

ಪ್ರಾಮಾಣಿಕತೆ, ವಿಶ್ವಾಸಾರ್ಹತೆಗಳ ಬಗ್ಗೆ ಅಧ್ಯಯನ ನಡೆಸಿ ಸುನ್ನತ್ತನ್ನು ಅತ್ಯಂತ ಶುದ್ಧ ರೂಪದಲ್ಲಿ ಹಾಗೂ ಸಹೀಹ್ ಆದ ವರದಿಗಳೆಂದು ದಾಖಲಿಸಲಾಯಿತು. ಪಾಂಡಿತ್ಯವುಳ್ಳ ಜನರು ಅಧಿಕೃತ ಸುನ್ನತ್ತನ್ನು ಗ್ರಂಥಗಳ ಮೂಲಕ ಚಲಾವಣೆ ನಡೆಸಿದರು. ಅಲ್ಲಾಹು ತನ್ನ ಗ್ರಂಥವನ್ನು ಭ್ರಷ್ಟಜನರ ಹಸ್ತಕ್ಷೇಪದಿಂದ, ಧರ್ಮಭ್ರಷ್ಟರ ಪಥಭ್ರಷ್ಟತೆಯಿಂದ ಹೇಗೆ ಸಂರಕ್ಷಿಸಿಟ್ಟಿರುವನೋ, ಅದೇ ರೀತಿ ತನ್ನ ಗ್ರಂಥದ ಅಧಿಕೃತ ವ್ಯಾಖ್ಯಾನವಾದ ಪ್ರವಾದಿಚರ್ಯೆಗಳನ್ನು ಅತ್ಯಂತ ಶುದ್ಧ ರೂಪದಲ್ಲಿ ಸಂರಕ್ಷಿಸಿಡುವ ವ್ಯವಸ್ಥೆಯನ್ನೂ ಮಾಡಿರುವನು. ಇದನ್ನು ಅಲ್ಲಾಹು ಕುರ್‌ಆನ್‌ನಲ್ಲಿ ವಾಗ್ದಾನದ ರೂಪದಲ್ಲಿ ಹೇಳಿರುವನು.

﴿ إِنَّا نَحْنُ نَزَّلْنَا ٱلذِّكْرَ وَإِنَّا لَهُۥ لَحَٰفِظُونَ ٩ ﴾

**"ಖಂಡಿತವಾಗಿಯೂ ಈ ಉಪದೇಶವನ್ನು ಅವತೀರ್ಣಗೊಳಿಸಿದವರು ನಾವಾಗಿರುವೆವು. ಖಂಡಿತವಾಗಿಯೂ ಅದನ್ನು ನಾವು ಸಂರಕ್ಷಿಸುವೆವು."** [28]

ಪ್ರವಾದಿ(ﷺ)ರವರ ಆಜ್ಞೆ, ಆದೇಶಗಳು ಅಲ್ಲಾಹನ ವತಿಯಿಂದಲೇ ಅವತೀರ್ಣಗೊಂಡವುಗಳು ಎಂಬುದು ನಿಸ್ಸಂಶಯ. ಆದುದರಿಂದ ತನ್ನ ಗ್ರಂಥವನ್ನು ಸಂರಕ್ಷಿಸಿದ ಹಾಗೆಯೇ ಸುನ್ನತ್ತನ್ನೂ ಅಲ್ಲಾಹು ಸಂರಕ್ಷಿಸಿಟ್ಟಿರುವನು. ಈ ಕಾರ್ಯಕ್ಕಾಗಿ ಅಲ್ಲಾಹು ಸೂಕ್ಷ್ಮಗ್ರಾಹಿಗಳಾದ, ಅಗಾಧ ಪಾಂಡಿತ್ಯವುಳ್ಳ ವಿದ್ವಾಂಸರನ್ನು ಆರಿಸಿಕೊಂಡನು. ಇವರು ಅವಿವೇಕಿಗಳಿಂದ, ಅಜ್ಞಾನಿಗಳ ದುರ್ವ್ಯಾಖ್ಯಾನಗಳಿಂದ, ಧರ್ಮಭ್ರಷ್ಟರ ಹಸ್ತಕ್ಷೇಪಗಳಿಂದ ಸುನ್ನತ್ತನ್ನು ಸುರಕ್ಷಿತಗೊಳಿಸಿದರು. ಈ ಕಾರ್ಯವು ಅತ್ಯಾವಶ್ಯಕವೂ ಆಗಿತ್ತು. ಏಕೆಂದರೆ ಪ್ರವಾದಿ(ﷺ)ರವರು ನಡೆದಾಡುವ ಕುರ್‌ಆನ್ ಆಗಿದ್ದರು. ಪ್ರವಾದಿಚರ್ಯೆಗಳು ಅಲ್ಲಾಹನ ಗ್ರಂಥದ ವ್ಯಾಖ್ಯಾನವಾಗಿದೆ. ಕುರ್‌ಆನ್‌ನಲ್ಲಿರುವ ಸಾಮಾಜಿಕ, ಧಾರ್ಮಿಕ ನಿಯಮಗಳ ವಿಶಾಲ ವಿವರಣೆಗಳು ಸುನ್ನತ್‌ಗಳಾಗಿವೆ. ಕುರ್‌ಆನ್‌ನಲ್ಲಿ ಸವಿಸ್ತಾರವಾಗಿ ವಿವರಿಸದೇ ಇರುವ ಇನ್ನಿತರ ನಿಯಮಗಳ ವಿವರಣೆಗಳು ಪೂರ್ಣ ಪ್ರಮಾಣದೊಂದಿಗೆ ಕಾಣಸಿಗುವುದು ಸುನ್ನತ್‌ನಲ್ಲಾಗಿದೆ. ಉದಾಹರಣೆಗೆ, ಸ್ತನಪಾನ ಸಂಬಂಧಿತ ನಿಯಮಗಳ ಸಮಗ್ರ ವಿವರಣೆಗಳು, ವಾರಸು ಹಕ್ಕಿನ ನಿಯಮಗಳ ಪೈಕಿ ಕೆಲವೊಂದು ನಿಯಮಗಳು, ವಿವಾಹ ನಿಷಿದ್ಧ ಸ್ತ್ರೀ ಹಾಗೂ ಪಿತೃ ಸಂಬಂಧೀ ಸ್ತ್ರೀಯ ವಿವಾಹ ನಿಷಿದ್ಧತೆಯ ನಿಯಮಗಳು ಇತ್ಯಾದಿಗಳ ಕೂಲಂಕುಶ ವಿವರಣೆಗಳನ್ನು ಕುರ್‌ಆನಿನಲ್ಲಿ ಕಾಣಲು ಅಸಾಧ್ಯ. ಅಧಿಕೃತ ಸುನ್ನತ್‌ನಲ್ಲಿ ಮಾತ್ರವೇ ಇವುಗಳನ್ನು ಕಾಣಲು ಸಾಧ್ಯ.

---

**28 ಕುರ್‌ಆನ್** 15:9

## ذكر بعض ما ورد من الصحابة والتابعين ومن بعدهم من أهل العلم في تعظيم السنة ووجوب العمل بها

## ಸುನ್ನತ್ತನ್ನು ಗೌರವಿಸುವುದು ಮತ್ತು ಅದರ ಪ್ರಕಾರ ಅಮಲ್ ಮಾಡುವುದು ಕಡ್ಡಾಯವಾಗಿದೆಯೆಂಬ ಬಗ್ಗೆ ಸಹಾಬಾಗಳ, ತಾಬಿಊನ್‌ಗಳ ಮತ್ತು ಅವರ ನಂತರದ ವಿದ್ವಾಂಸರ ಅಭಿಪ್ರಾಯಗಳು

ಮುತ್ತಫಕುನ್ ಅಲೈಹಿ ಹದೀಸೊಂದರಲ್ಲಿ ಅಬೂ ಹುರೈರಾ(رضي الله عنه)ರವರು ಹೇಳುತ್ತಾರೆ:

لَمَّا تُوُفِّيَ رَسُولُ اللَّهِ صَلَّى اللَّهُ عَلَيْهِ وَسَلَّمَ وَارْتَدَّ مَنِ ارْتَدَّ مِنَ الْعَرَبِ، قَالَ أَبُو بَكْرٍ الصِّدِّيقُ رَضِيَ اللَّهُ عَنْهُ: وَاللَّهِ، لَأُقَاتِلَنَّ مَنْ فَرَّقَ بَيْنَ الصَّلَاةِ وَالزَّكَاةِ، فَقَالَ لَهُ عُمَرُ رَضِيَ اللَّهُ عَنْهُ: كَيْفَ تُقَاتِلُهُمْ وَقَدْ قَالَ النَّبِيُّ صَلَّى اللَّهُ عَلَيْهِ وَسَلَّمَ: «أُمِرْتُ أَنْ أُقَاتِلَ النَّاسَ حَتَّى يَقُولُوا لَا إِلَهَ إِلَّا اللَّهُ، فَإِنْ قَالُوهَا عَصَمُوا مِنِّي دِمَاءَهُمْ وَأَمْوَالَهُمْ إِلَّا بِحَقِّهَا؟» فَقَالَ أَبُو بَكْرٍ الصِّدِّيقُ: أَلَيْسَتِ الزَّكَاةُ مِنْ حَقِّهَا؟ وَاللَّهِ، لَوْ مَنَعُونِي عَنَاقًا كَانُوا يُؤَدُّونَهَا إِلَى رَسُولِ اللَّهِ صَلَّى اللَّهُ عَلَيْهِ وَسَلَّمَ لَقَاتَلْتُهُمْ عَلَى مَنْعِهَا. فَقَالَ عُمَرُ رَضِيَ اللَّهُ عَنْهُ: فَمَا هُوَ إِلَّا أَنْ عَرَفْتُ أَنَّ اللَّهَ قَدْ شَرَحَ صَدْرَ أَبِي بَكْرٍ لِلْقِتَالِ فَعَرَفْتُ أَنَّهُ الْحَقُّ.

“ಅಲ್ಲಾಹನ ಸಂದೇಶವಾಹಕರು(ﷺ) ಮರಣಹೊಂದಿದ ಬಳಿಕ ಅರಬರಲ್ಲಿ ಕೆಲವರು ಧರ್ಮತ್ಯಾಗ ಮಾಡಿ ಧರ್ಮಭ್ರಷ್ಟರಾದರು. ಅಬೂಬಕ್ರ್(رضي الله عنه) ಹೇಳಿದರು: ಅಲ್ಲಾಹನಾಣೆ, ನಮಾಝ್ ಮತ್ತು ಝಕಾತ್‌ಗಳ ಮಧ್ಯೆ ತಾರತಮ್ಯ ಮಾಡುವವರೊಂದಿಗೆ ಖಂಡಿತವಾಗಿಯೂ ನಾನು ಯುದ್ಧ ಸಾರುವೆನು. ಆಗ ಉಮರ್(رضي الله عنه) ಹೇಳಿದರು: ನೀವು ಅವರೊಂದಿಗೆ ಯುದ್ಧ ಸಾರುವುದಾದರೂ ಹೇಗೆ? ಅಲ್ಲಾಹನ ಸಂದೇಶವಾಹಕರು(ﷺ): ಜನರು ಅಲ್ಲಾಹನ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ ಎಂದು ಹೇಳುವ ತನಕ ಅವರೊಡನೆ

**ಯುದ್ಧ ಮಾಡಲು ನನಗೆ ಆದೇಶವಿದೆ. ಆದುದರಿಂದ ಅವರು ಅದನ್ನು ಹೇಳಿದರೆ ಅವರ ರಕ್ತ ಮತ್ತು ಸಂಪತ್ತುಗಳು ನನ್ನಿಂದ ಸಂರಕ್ಷಿಸಲ್ಪಡುತ್ತದೆ. ಅದರ ಹಕ್ಕಿನ ಹೊರತು ಎಂದು ಹೇಳಿರುವರಲ್ಲವೇ? ಅಬೂಬಕ್ರ್(رضي الله عنه) ಹೇಳಿದರು: ಝಕಾತ್ ಕೂಡ ಅದರ ಹಕ್ಕುಗಳ ಪೈಕಿಯಲ್ಲವೇ? ಅಲ್ಲಾಹನಾಣೆ, ಅಲ್ಲಾಹನ ಸಂದೇಶವಾಹಕರಿಗೆ ಅವರು ಸಲ್ಲಿಸುತ್ತಿದ್ದವುಗಳ ಪೈಕಿ ಚಿಕ್ಕದೊಂದು ಆಡಿನ ಮರಿಯನ್ನು ತಡೆದಿರಿಸಿಕೊಂಡರೂ ನಾನು ಅದಕ್ಕಾಗಿ ಅವರೊಂದಿಗೆ ಯುದ್ಧ ಮಾಡುವೆನು. ಉಮರ್(رضي الله عنه) ಹೇಳಿದರು: ಆಗಲೇ ನನಗೆ ಅಬೂಬಕ್ರ್(رضي الله عنه)ರ ಹೃದಯವನ್ನು ಅವರೊಂದಿಗೆ ಯುದ್ಧ ಮಾಡಲು ಅಲ್ಲಾಹು ತೆರೆದಿರುವನು ಎಂದು ಹೊಳೆಯಿತು ಮತ್ತು ಅದೇ ಸರಿಯಾದುದೆಂದೂ ನನಗೆ ಮನದಟ್ಟಾಯಿತು.”** (29)

ಸಹಾಬಾಗಳು ಈ ವಿಷಯದಲ್ಲಿ ಅವರನ್ನು ಅನುಸರಿಸಿದರು ಮತ್ತು ಧರ್ಮತ್ಯಾಗಿಗಳೊಂದಿಗೆ ಯುದ್ಧ ಮಾಡಿದರು. ಅವರು ತಮ್ಮ ಧರ್ಮಭ್ರಷ್ಟತೆಯಿಂದ ಇಸ್ಲಾಮಿಗೆ ಮರಳುವಂತೆ ಮಾಡಿದರು ಮತ್ತು ಧರ್ಮಭ್ರಷ್ಟತೆಗೆ ಅಂಟಿಕೊಂಡವರನ್ನು ಹತ ಮಾಡಿದರು.

ಈ ಪ್ರಕರಣವು ಸುನ್ನತ್ತನ್ನು ಗೌರವಿಸುವುದು ಮತ್ತು ಕಡ್ಡಾಯವಾಗಿ ಅನುಸರಿಸುವುದಕ್ಕಿರುವ ಸುಸ್ಪಷ್ಟ ಪುರಾವೆಯಾಗಿದೆ. ವೃದ್ಧ ಮಹಿಳೆಯೊಬ್ಬರು ವಾರಸು ಹಕ್ಕನ್ನು ಕೇಳಿಕೊಂಡು ಅಬೂಬಕ್ರ್(رضي الله عنه)ರವರ ಬಳಿಗೆ ಬಂದ ಘಟನೆಯು ಇದಕ್ಕೆ ಇನ್ನೊಂದು ಸುಸ್ಪಷ್ಟ ಪುರಾವೆಯಾಗಿದೆ.

ಅಬೂಬಕ್ರ್(رضي الله عنه)ರವರು ಆ ಮಹಿಳೆಗೆ ಹೇಳಿದರು:

**لَيْسَ لَكِ فِي كِتَابِ اللَّهِ شَيْءٌ، وَلَا أَعْلَمُ أَنَّ رَسُولَ اللَّهِ صَلَّى اللَّهُ عَلَيْهِ وَسَلَّمَ قَضَى لَكِ بِشَيْءٍ، وَسَأَسْأَلُ النَّاسَ. ثُمَّ سَأَلَ رَضِيَ اللَّهُ عَنْهُ الصَّحَابَةَ، فَشَهِدَ عِنْدَهُ بَعْضُهُمْ بِأَنَّ النَّبِيَّ صَلَّى اللَّهُ عَلَيْهِ وَسَلَّمَ أَعْطَى الْجَدَّةَ السُّدُسَ، فَقَضَى لَهَا بِذَلِكَ.**

**“ನಿನ್ನ (ವಾರಸು ಹಕ್ಕಿನ) ಬಗ್ಗೆ ಅಲ್ಲಾಹನ ಗ್ರಂಥದಲ್ಲಿ ಏನೊಂದೂ ಉಲ್ಲೇಖವಾಗಿಲ್ಲ. ಅಲ್ಲಾಹನ ಸಂದೇಶವಾಹಕರು(ﷺ) ಈ ಬಗ್ಗೆ ಏನಾದರೂ ಸೂಚನೆಯನ್ನು ನೀಡಿದ್ದೂ ನನಗೆ ಅರಿವಿಲ್ಲ. ಆದುದರಿಂದ ನಾನು ಜನರೊಂದಿಗೆ ಕೇಳುತ್ತೇನೆ. ಆ**

**29** ಸಹೀಹುಲ್ ಬುಖಾರಿ (1335), ಸಹೀಹ್ ಮುಸ್ಲಿಮ್ (20), ಸುನನು ತ್ತಿರ್ಮಿದಿ (2607), ಸುನನು ನ್ನಸಾಈ (3091), ಸುನನ್ ಅಬೀ ದಾವೂದ್ (1556), ಮುಸ್ನದ್ ಅಹ್ಮದ್ ಇಬ್ನ್ ಹಂಬಲ್ (1/19)

**ಬಳಿಕ ಅವರು ಸಹಾಬಿಗಳೊಂದಿಗೆ ಸಮಾಲೋಚನೆ ಮಾಡಿದರು. ಆಗ ಅವರ ಪೈಕಿ ಕೆಲವರು ಅಲ್ಲಾಹನ ಸಂದೇಶವಾಹಕರು(ﷺ) ಓರ್ವ ವೃದ್ಧ ಮಹಿಳೆಗೆ ಆರನೇ ಒಂದು ಹಕ್ಕನ್ನು ನೀಡಿದ್ದರ ಬಗ್ಗೆ ಸಾಕ್ಷ್ಯ ವಹಿಸಿದರು. ಆದುದರಿಂದ ಅಬೂಬಕ್ರ್(ؓ) ಅದೇ ಅವರಿಗೂ ದೊರೆಯಬೇಕೆಂದೂ ತೀರ್ಪಿತ್ತರು.”** [30]

ಉಮರ್(ؓ)ರವರು ಅವರು ನೇಮಿಸಿದ ಅಧಿಕಾರಿಗಳೊಂದಿಗೆ ಸಮಾಲೋಚನೆ ಮಾಡುತ್ತಿದ್ದರು ಮತ್ತು ಅವರು ಅಲ್ಲಾಹನ ಗ್ರಂಥಕ್ಕನುಗುಣವಾಗಿಯೂ ಜನರ ಮಧ್ಯೆ ನ್ಯಾಯ ತೀರ್ಮಾನ ಮಾಡಬೇಕೆಂದು ಹೇಳುತ್ತಿದ್ದರು. ಅಲ್ಲಾಹನ ಗ್ರಂಥದಲ್ಲಿ ಅವರದನ್ನು ಕಾಣದಿದ್ದಲ್ಲಿ ಪ್ರವಾದಿ(ﷺ)ರವರ ಸುನ್ನತ್ತಿಗೆ ಅದನ್ನು ಕೊಂಡೊಯ್ಯಬೇಕೆಂದು ತಾಕೀತು ಮಾಡುತ್ತಿದ್ದರು.

ಇದೇ ರೀತಿ ಗರ್ಭಪಾತಕ್ಕೀಡಾದ ಮಹಿಳೆಯೊಬ್ಬರ ಅರ್ಥಾತ್ ಆ ಮಹಿಳೆಯೊಂದಿಗೆ ಅನುಚಿತ ರೀತಿಯಲ್ಲಿ ವರ್ತಿಸಿದಾಗ ಉಂಟಾದ ಅಕಾಲ ಗರ್ಭಪಾತದ ವಿವಾದವೊಂದರಲ್ಲಿ ತೀರ್ಪು ನೀಡುವ ಸಂದರ್ಭದಲ್ಲಿ ಉಮರ್(ؓ)ರಿಗೆ ತಮ್ಮ ಸಹವರ್ತಿಗಳೊಂದಿಗೆ ಸಮಾಲೋಚನೆ ಮಾಡಬೇಕಾಗಿ ಬಂದಿತ್ತು. ಆಗ ಮುಹಮ್ಮದ್ ಇಬ್ನ್ ಮಸ್ಲಮ(ؓ) ಮತ್ತು ಅಲ್‌ಮುಗೀರಃ ಇಬ್ನ್ ಶುಅ್‌ಬಃ(ؓ)ರವರು ಪ್ರವಾದಿ(ﷺ)ರವರು ಅಂತಹುದೇ ಪ್ರಕರಣವೊಂದರಲ್ಲಿ ಒಬ್ಬ ಗುಲಾಮಸ್ತ್ರೀ ಅಥವಾ ಪುರುಷನನ್ನು ಪರಿಹಾರವಾಗಿ ನೀಡಲು ತೀರ್ಪು ನೀಡುತ್ತಿದ್ದರು ಎಂಬುದಾಗಿ ಸಾಕ್ಷ್ಯ ವಹಿಸಿದರು. [31]

ಇನ್ನು ತನ್ನ ಪತಿಯ ಮರಣಾನಂತರ ಮಹಿಳೆಯು ತನ್ನ ಪತಿಯ ಮನೆಯಲ್ಲಿರಬೇಕಾದ ಅವಧಿಯ ವಿಷಯವು ಉಸ್ಮಾನ್(ؓ)ರವರನ್ನು ಗೊಂದಲಕ್ಕೀಡು ಮಾಡಿತ್ತು. ಆಗ ಅಬೂ ಸಈದ್(ؓ)ರವರ ಸೋದರಿ ಫುರಯ್ಯಾ ಬಿನ್ತ್ ಮಾಲಿಕ್ ಇಬ್ನ್ ಸಿನಾನ್ (ؓ)ರವರು ಪ್ರವಾದಿ(ﷺ)ರವರು ಸ್ತ್ರೀಯು ತನ್ನ ಪತಿಯ ಮರಣದ ಬಳಿಕ ಪತಿಯ ಮನೆಯಲ್ಲಿ ಆಕೆಯ ಇದ್ದಃ ಕೊನೆಗೊಳ್ಳುವ ತನಕ ಉಳಿಯಲು ಆದೇಶಿಸಿರುವುದಾಗಿ ತಿಳಿಸಿದರು. ಉಸ್ಮಾನ್(ؓ)ರವರು ಅದೇ ಪ್ರಕಾರ ತೀರ್ಪು ನೀಡಿದರು. [32]

ಇದೇ ರೀತಿ ಮದ್ಯಪಾನ ಮಾಡಿದ್ದಕ್ಕಾಗಿ ಅಲ್‌ವಲೀದ್ ಇಬ್ನ್ ಉಕ್ಬಾರಿಗೆ ಶಿಕ್ಷೆ ವಿಧಿಸುವ ವಿಷಯದಲ್ಲಿ ಉಸ್ಮಾನ್(ؓ)ರವರು ಪ್ರವಾದಿಚರ್ಯೆಯ ಪ್ರಕಾರವೇ ತೀರ್ಪಿತ್ತರು. [33]

ಇನ್ನು ಉಸ್ಮಾನ್(ؓ)ರವರು ಜನರನ್ನು ಹಜ್ಜುತ್ತಮತ್ತುಅ್ (ಹಜ್‌ನೊಂದಿಗೆ

---

30 **ಸುನನ್ ಅಬೀ ದಾವೂದ್** (2894)

31 **ಸಹೀಹುಲ್ ಬುಖಾರಿ** (6905), **ಸಹೀಹ್ ಮುಸ್ಲಿಮ್** (1681)

32 **ಸುನನ್ ಅಬೀ ದಾವೂದ್** (2300)

33 **ಸಹೀಹ್ ಮುಸ್ಲಿಮ್** (1707)

ಉಮ್ರಾವನ್ನು ನಿರ್ವಹಿಸುವುದು)ನಿಂದ ತಡೆಯುತ್ತಿರುವರು ಎಂಬ ವಾರ್ತೆಯು ಅಲೀ(ರ)ರವರನ್ನು ತಲುಪಿದಾಗ ಅವರು ಸ್ವಯಂ ಹಜ್ಜುತ್ತಮತ್ತುಅ್ ನಿರ್ವಹಿಸಲು ಹೋಗುವುದಾಗಿ ಘೋಷಿಸಿದರು. ಮತ್ತು ಅವರು ಹೇಳಿದರು:

لَا أَدَعُ سُنَّةَ رَسُولِ اللَّهِ صَلَّى اللَّهُ عَلَيْهِ وَسَلَّمَ لِقَوْلِ أَحَدٍ مِنَ النَّاسِ.

**"ಜನರ ಮಾತಿಗೆ ಕಿವಿಗೊಟ್ಟು ಅಲ್ಲಾಹನ ಸಂದೇಶವಾಹಕರ(ﷺ) ಸುನ್ನತ್ತನ್ನು ತೊರೆಯಲು ನಾನು ಖಂಡಿತಾ ತಯಾರಿಲ್ಲ."** [34]

ಆ ಬಳಿಕ ಕೆಲವು ಜನರು ಹಜ್ಜ್‌ನೊಂದಿಗೆ ಉಮ್ರಾ ನಿರ್ವಹಿಸುವ ವಿಷಯದ ಬಗ್ಗೆ ಇಬ್ನ್ ಅಬ್ಬಾಸ್(ರ)ರೊಂದಿಗೆ ಚರ್ಚಿಸುತ್ತಾ ಹಜ್ಜನ್ನು ಒಂಟಿಯಾಗಿ ನಿರ್ವಹಿಸುವುದಕ್ಕೆ ಸಮರ್ಥನೆಯಾಗಿ ಅಬೂಬಕ್ರ್(ರ) ಮತ್ತು ಉಮರ್(ರ)ರವರ ಮಾತುಗಳನ್ನು ಅವರ ಮುಂದಿರಿಸಿದಾಗ ಇಬ್ನ್ ಅಬ್ಬಾಸ್(ರ)ರವರು ಹೇಳಿದರು:

يُوشِكُ أَنْ تَنْزِلَ عَلَيْكُمْ حِجَارَةٌ مِنَ السَّمَاءِ، أَقُولُ: قَالَ رَسُولُ اللَّهِ صَلَّى اللَّهُ عَلَيْهِ وَسَلَّمَ وَتَقُولُونَ: قَالَ أَبُو بَكْرٍ وَعُمَرُ.

**"ನಿಮ್ಮ ಮೇಲೆ ಆಕಾಶದಿಂದ ಕಲ್ಲಿನ ಮಳೆ ಸುರಿಯಬಹುದು. ಅಲ್ಲಾಹನ ಸಂದೇಶವಾಹಕರು(ﷺ) ಹೇಳಿದರೆಂದು ನಾನು ಹೇಳುವಾಗ ನೀವು ಅಬೂಬಕ್ರ್ ಮತ್ತು ಉಮರ್ ಹೇಳಿದರು ಎನ್ನುವುದೇ?"** [35]

ಅಬೂಬಕ್ರ್(ರ) ಮತ್ತು ಉಮರ್(ರ)ರಂತಹ ಘನವೆತ್ತ ಸಹಾಬಿವರ್ಯರ ಮಾತಿನ ಮೇಲೆ ಸುನ್ನತ್ತನ್ನು ವಿರೋಧಿಸುವವರ ಸ್ಥಿತಿ ಇದಾಗಿರುವಾಗ ಇನ್ನು ಅವರಿಗಿಂತ ಕೆಳದರ್ಜೆಯವರ ಮಾತಿನ ಆಧಾರದಲ್ಲಿ ಸುನ್ನತ್ತನ್ನು ತಿರಸ್ಕರಿಸುವವರ ಅಥವಾ ಅಭಿಪ್ರಾಯದ ಮೇಲೆ ಸುನ್ನತ್ತನ್ನು ತಿರಸ್ಕರಿಸುವವರ ಸ್ಥಿತಿ ಏನಿದ್ದೀತು?

ಒಬ್ಬ ವ್ಯಕ್ತಿ ಸುನ್ನತ್ತಿನ ಬಗ್ಗೆ ಅಬ್ದುಲ್ಲಾಹ್ ಇಬ್ನ್ ಉಮರ್(ರ)ರೊಂದಿಗೆ ತರ್ಕಿಸಿದಾಗ ಅಬ್ದುಲ್ಲಾಹ್(ರ)ರವರು ಉತ್ತರಿಸಿದರು:

---

34 **ಸಹೀಹುಲ್ ಬುಖಾರಿ** (1563)

35 **ಮುಸ್ನದ್ ಅಹ್ಮದ್ ಇಬ್ನ್ ಹಂಬಲ್** (1/337). ಅಲ್‌ಖತೀಬ್ ತಮ್ಮ **ಅಲ್‌ಫಕೀಹ್ ವಲ್‌ಮುತಫಕ್ಕಿಹ್**‌ನಲ್ಲಿ (1/145)

## هَلْ نَحْنُ مَأْمُورُونَ بِاتِّبَاعِ عُمَرَ أَوْ بِالتِّبَاعِ السُّنَّةِ؟

**“ನಮಗೆ ಅನುಸರಿಸಲು ಆಜ್ಞಾಪಿಸಲ್ಪಟ್ಟಿರುವುದು ಉಮರ್‌ರನ್ನೋ ಅಥವಾ ಸುನ್ನತ್ತನ್ನೋ?”**

ಒಬ್ಬ ವ್ಯಕ್ತಿ ಇಮ್ರಾನ್ ಇಬ್ನ್ ಹುಸೈನ್(رضي الله عنه)ರವರ ಬಳಿ ಬಂದು ಅಲ್ಲಾಹನ ಗ್ರಂಥದ ಬಗ್ಗೆ ವಿವರಿಸಿರಿ ಎಂದರು. ಆ ಸಮಯದಲ್ಲಿ ಅವರು (ಇಮ್ರಾನ್) ಜನರಿಗೆ ಸುನ್ನತ್ತಿನ ಬಗ್ಗೆ ವಿವರಣೆ ನೀಡುತ್ತಿದ್ದರು. ಇಮ್ರಾನ್(رضي الله عنه) ಕೋಪಿಸಿಕೊಳ್ಳುತ್ತಾ ಹೇಳಿದರು:

إِنَّ السُّنَّةَ هِيَ تَفْسِيرُ كِتَابِ اللَّهِ، وَلَوْلَا السُّنَّةُ لَمْ نَعْرِفْ أَنَّ الظُّهْرَ أَرْبَعٌ، وَالْمَغْرِبُ ثَلَاثٌ، وَالْفَجْرُ رَكْعَتَانِ، وَلَمْ نَعْرِفْ تَفْصِيلَ أَحْكَامِ الزَّكَاةِ إِلَى غَيْرِ ذَلِكَ مِمَّا جَاءَتْ بِهِ السُّنَّةُ مِنْ تَفْصِيلِ الْأَحْكَامِ.

**“ಸುನ್ನತ್ ಎಂದರೆ ಅಲ್ಲಾಹನ ಗ್ರಂಥದ ವಿವರಣೆಯೇ ಆಗಿದೆ. ಅನ್ಯಥಾ ಝುಹ್ರ್ ನಮಾಝ್ ನಾಲ್ಕು ರಕ್‌ಅತ್‌ಗಳೆಂದೂ, ಮಗ್ರಿಬ್ ನಮಾಝ್ ಮೂರು ರಕ್‌ಅತ್‌ಗಳೆಂದೂ, ಫಜ್ರ್ ನಮಾಝ್ ಎರಡು ರಕ್‌ಅತ್‌ಗಳೆಂದೂ ಅರಿತುಕೊಳ್ಳಲು ಅಸಾಧ್ಯವಿತ್ತು. ಮತ್ತು ಝಕಾತಿನ ನಿಯಮಗಳನ್ನು ಸವಿಸ್ತಾರವಾಗಿ ತಿಳಿದುಕೊಳ್ಳಲೂ ಅಸಾಧ್ಯವಿತ್ತು. ಈ ರೀತಿ ಇಸ್ಲಾಮೀ ನಿಯಮಗಳ ಪೂರ್ಣ ವಿಶದೀಕರಣಗಳನ್ನು ಸುನ್ನತ್‌ನಲ್ಲಿ ಮಾತ್ರವೇ ಕಾಣಲು ಸಾಧ್ಯ.”**

ಆದುದರಿಂದ ಸಹಾಬಿಗಳ ಮಾತುಗಳು ಸಹ ಸುನ್ನತ್ ಅರ್ಥಾತ್ ಪ್ರವಾದಿಚರ್ಯೆಗೆ ನೀಡಬೇಕಾದ ಅಪಾರ ಮಾನ್ಯತೆ, ಗೌರವ, ಪ್ರಾಮುಖ್ಯತೆಗಳ ಬಗ್ಗೆ ಸೂಚನೆಗಳನ್ನು ನೀಡುತ್ತದೆ. ಮತ್ತು ಅವುಗಳ ಕಡ್ಡಾಯ ಅನುಸರಣೆಯನ್ನು ಸ್ಪಷ್ಟಪಡಿಸುತ್ತದೆ. ಪ್ರವಾದಿಚರ್ಯೆಗೆ ವಿರುದ್ಧವಾಗಿ ಕಾರ್ಯವೆಸಗುವುದರಿಂದ ಬರುವ ಅನಾಹುತಗಳ ಬಗ್ಗೆಯೂ ಸಾಕಷ್ಟು ಎಚ್ಚರಿಕೆಗಳು ಸಹಾಬಿಗಳ ಮಾತುಗಳಲ್ಲಿರುವುದನ್ನು ಕಾಣಬಹುದು.

ಅಬ್ದುಲ್ಲಾಹ್ ಇಬ್ನ್ ಉಮರ್(رضي الله عنه)ರವರು **“ಅಲ್ಲಾಹನ ದಾಸಿಯರನ್ನು ಅಲ್ಲಾಹನ ಮಸೀದಿಯಿಂದ ತಡೆಯಬೇಡಿರಿ”** ಎಂಬ ಪ್ರವಾದಿ(ﷺ)ರವರ ವಚನವನ್ನು ಪ್ರಸ್ತಾಪಿಸಿದಾಗ ಅವರ ಪುತ್ರರ ಪೈಕಿ ಒಬ್ಬರು ‘ಅಲ್ಲಾಹನಾಣೆ, ನಾವು ಖಂಡಿತವಾಗಿಯೂ ಅವರನ್ನು ತಡೆಯುವೆವು’ ಎಂದರು. ಆಗ ಅಬ್ದುಲ್ಲಾಹ್(رضي الله عنه)ರವರು ಬಹಳಷ್ಟು ಕೋಪಗೊಂಡರು ಮತ್ತು ಮಗನನ್ನು ತೀವ್ರವಾಗಿ ಆಕ್ಷೇಪಿಸುತ್ತಾ ಹೇಳಿದರು:

أَقُولُ: قَالَ رَسُولُ اللَّهِ صَلَّى اللَّهُ عَلَيْهِ وَسَلَّمَ، وَتَقُولُ: وَاللَّهِ لَنَمْنَعُهُنَّ؟

**“ನಾನು ಅಲ್ಲಾಹನ ಸಂದೇಶವಾಹಕರು(ﷺ) ಹೇಳಿದರು ಎನ್ನುವಾಗ ನೀನು ಅಲ್ಲಾಹನಾಣೆ, ನಾವು ತಡೆಯುವೆವು ಎನ್ನುವೆಯಾ?”** [36]

ಪ್ರವಾದಿ(ﷺ)ರವರ ಸಹವರ್ತಿಯಾಗಿದ್ದ ಅಬ್ದುಲ್ಲಾಹ್ ಇಬ್ನುಲ್ ಮುಗಫ್ಫಲ್ ಅಲ್‌ಮುಝ್ನಿ(ؓ)ರವರು ತಮ್ಮ ಸಂಬಂಧಿಕರೊಬ್ಬರು ಕಲ್ಲೆಸೆಯುತ್ತಿರುವುದಾಗಿ ಕಂಡರು. ಆ ಸಂಬಂಧಿಕರನ್ನು ತಡೆಯುತ್ತಾ ಅವರು ಹೇಳಿದರು: ಅಲ್ಲಾಹನ ಪ್ರವಾದಿ (ﷺ)ರವರು ಕಲ್ಲೆಸೆಯುವುದನ್ನು ವಿರೋಧಿಸಿರುವರು. ಯಾಕೆಂದರೆ ಅದು ಬೇಟೆಯನ್ನು ಕೊಲ್ಲಲಾರದು. ಶತ್ರುವನ್ನು ಸೋಲಿಸಲಾರದು. ಬದಲಾಗಿ ಮೂಳೆಗಳನ್ನು ಒಂದಿಷ್ಟು ಮುರಿದೀತು ಅಥವಾ ಕಣ್ಣುಗುಡ್ಡೆಗಳನ್ನಷ್ಟೇ ಕೀಳಿ ಹಾಕೀತು. ಇದರ ಬಳಿಕವೂ ಅವರು ಆ ವ್ಯಕ್ತಿಯನ್ನು ಕಲ್ಲೆಸೆಯುತ್ತಿರುವುದಾಗಿ ಕಂಡಾಗ ಅವರು ಹೇಳಿದರು:

وَاللَّهِ، لَا كَلَّمْتُكَ أَبَدًا، أُخْبِرُكَ أَنَّ رَسُولَ اللَّهِ صَلَّى اللَّهُ عَلَيْهِ وَسَلَّمَ يَنْهَى عَنِ الْخَذْفِ ثُمَّ تَعُودُ؟

**“ಅಲ್ಲಾಹನಾಣೆ, ನಾನೆಂದೂ ನಿನ್ನೊಂದಿಗೆ ಮಾತನಾಡಲಾರೆ. ಅಲ್ಲಾಹನ ಸಂದೇಶವಾಹಕರು(ﷺ) ಕಲ್ಲೆಸೆಯುವುದನ್ನು ವಿರೋಧಿಸಿರುವರು ಎಂದು ನಾನು ಹೇಳುವಾಗ ನೀನದನ್ನು ಮುಂದುವರಿಸುತ್ತಿರುವೆಯಾ?”** [37]

ಪ್ರಸಿದ್ಧ ತಾಬಿಈ ಆದ ಅಯ್ಯೂಬ್ ಅಸ್ಸಖ್ತಿಯಾನೀ(ؒ)ರವರು ಹೇಳಿರುವುದಾಗಿ ಅಲ್‌ಬೈಹಕೀ ಉದ್ಧರಿಸುತ್ತಾರೆ:

إِذَا حَدَّثْتَ الرَّجُلَ بِسُنَّةٍ فَقَالَ: دَعْنَا مِنْ هَذَا وَأَنْبِئْنَا عَنِ الْقُرْآنِ، فَاعْلَمْ أَنَّهُ ضَالٌّ.

**“ನೀವೊಬ್ಬ ವ್ಯಕ್ತಿಗೆ ಸುನ್ನತ್ತಿನ ಬಗ್ಗೆ ವಿವರಿಸುತ್ತೀರಿ ಮತ್ತು ಆ ವ್ಯಕ್ತಿಯು ಹೇಳುವನು:**

---

36 ಸಹೀಹ್ ಮುಸ್ಲಿಮ್ (442)

37 ಸಹೀಹುಲ್ ಬುಖಾರಿ (5479), ಸಹೀಹ್ ಮುಸ್ಲಿಮ್ (1954)

**ಇದು ಸಾಕು, ಇದರ ಬದಲು ನಮಗೆ ಕುರ್‌ಆನ್‌ನ ಬಗ್ಗೆ ತಿಳಿಸಿಕೊಡಿ. ಹಾಗಾದರೆ ತಿಳಿಯಿರಿ ಆ ವ್ಯಕ್ತಿಯು ಪಥಭ್ರಷ್ಟನಾಗಿದ್ದಾನೆಂದು."**

ಅಲ್‌ಔಝಾಈ(ರಹ್)ರವರು ಹೇಳುತ್ತಾರೆ:

السُّنَّةُ قَاضِيَةٌ عَلَى الْكِتَابِ، أَيْ تُقَيِّدُ مَا أَطْلَقَهُ، أَوْ بِأَحْكَامٍ لَمْ تُذْكَرْ فِي الْكِتَابِ، كَمَا فِي قَوْلِهِ تَعَالَى: ﴿وَأَنزَلْنَآ إِلَيْكَ ٱلذِّكْرَ لِتُبَيِّنَ لِلنَّاسِ مَا نُزِّلَ إِلَيْهِمْ وَلَعَلَّهُمْ يَتَفَكَّرُونَ ﴿٤٤﴾﴾

**"ಸುನ್ನತ್ ಅಲ್ಲಾಹನ ಗ್ರಂಥದ ಮೇಲೆ ನಿರ್ಣಾಯಕವಾಗಿದೆ. ಅರ್ಥಾತ್ ಅದು ಅನಿರ್ಬಂಧಿತಗೊಳಿಸಿರುವುದನ್ನು ಇದು ನಿರ್ಬಂಧಿತಗೊಳಿಸುತ್ತದೆ ಮತ್ತು ಅಲ್ಲಾಹನ ಗ್ರಂಥದಲ್ಲಿ ಉಲ್ಲೇಖಿಸಿರದ ನಿಯಮಗಳನ್ನು ಜಾರಿಗೆ ತರುತ್ತದೆ. ಇದನ್ನು ಅಲ್ಲಾಹನೇ ತನ್ನ ಗ್ರಂಥದಲ್ಲಿ ಹೀಗೆಂದು ಹೇಳಿರುವನು: ಜನರಿಗೆ ಅವತೀರ್ಣಗೊಂಡಿರುವುದನ್ನು ತಾವು ಅವರಿಗೆ ವಿವರಿಸಿಕೊಡುವ ಸಲುವಾಗಿ ಮತ್ತು ಅವರು ಚಿಂತಿಸಿ ಗ್ರಹಿಸುವುದಕ್ಕಾಗಿ ತಮಗೆ ನಾವು ಸಂದೇಶವನ್ನು ಅವತೀರ್ಣಗೊಳಿಸಿದೆವು."** [38]

ಮತ್ತು ಇದು **"ನಿಶ್ಚಯವಾಗಿಯೂ ನನಗೆ ಗ್ರಂಥ ಮತ್ತು ಅದರೊಂದಿಗೆ ಅದರಂತಿರುವುದನ್ನೂ ನೀಡಲಾಗಿದೆ"** ಎಂಬ ಪ್ರವಾದಿ(ﷺ)ರವರ ವಚನವನ್ನು ದೃಢೀಕರಿಸುತ್ತದೆ.

ಇನ್ನು ಆಮಿರ್ ಅಶ್ಶಅ್‌ಬೀ(ರಹ್) ಕೆಲವು ಜನರೊಂದಿಗೆ ಹೇಳಿರುವುದಾಗಿ ಅಲ್‌ಬೈಹಕೀ ವರದಿ ಮಾಡುತ್ತಾರೆ:

إِنَّمَا هَلَكْتُمْ فِي حِينِ تَرَكْتُمُ الْآثَارَ.

**"ನೀವು ನಾಶವಾದದ್ದು ನೀವು ಹದೀಸ್‌ಗಳನ್ನು ತಿರಸ್ಕರಿಸಿದ್ದಕ್ಕಾಗಿ"** ಅರ್ಥಾತ್ ಅಧಿಕೃತ ಪ್ರವಾದಿ ವಚನಗಳನ್ನು.

ಅಲ್‌ಔಝಾಈ(ರಹ್)ರವರು ಅವರ ಸಂಗಾತಿಗಳೊಬ್ಬರಿಗೆ ಹೇಳಿದ್ದಾಗಿ ಅಲ್‌ಬೈಹಕೀ

38 **ಕುರ್‌ಆನ್** 16:44

ಉದ್ಧರಿಸುತ್ತಾರೆ:

**إِذَا بَلَغَكَ عَنْ رَسُولِ اللَّهِ صَلَّى اللَّهُ عَلَيْهِ وَسَلَّمَ حَدِيثٌ، فَإِيَّاكَ أَنْ تَقُولَ بِغَيْرِهِ، فَإِنَّ رَسُولَ اللَّهِ صَلَّى اللَّهُ عَلَيْهِ وَسَلَّمَ كَانَ مُبَلِّغًا عَنِ اللَّهِ تَعَالَى.**

**"ಅಲ್ಲಾಹನ ಸಂದೇಶವಾಹಕರ(ﷺ) ಕಡೆಯಿಂದ ನಿಮಗೊಂದು ಹದೀಸ್ (ವಾರ್ತೆ) ತಲುಪಿದರೆ ಅದನ್ನು ತೊರೆದು ಇನ್ನೇನಾದರೂ ಹೇಳುವುದರ ಬಗ್ಗೆ ಜಾಗೃತೆ ವಹಿಸಿರಿ. ಏಕೆಂದರೆ ಅವರು(ﷺ) ಅಲ್ಲಾಹನ ಕಡೆಯಿಂದ ಸಂದೇಶವನ್ನು ತಲುಪಿಸಿದವರಾಗಿರುವರು."**

ಮತ್ತೊಬ್ಬ ಪ್ರಸಿದ್ಧ ಇಮಾಮರಾದ ಸುಫ್ಯಾನ್ ಇಬ್ನ್ ಸಈದ್(ರಹ್)ರವರು ಹೇಳಿದ್ದಾಗಿ ಅಲ್‌ಬೈಹಕೀ ಉದ್ಧರಿಸುತ್ತಾರೆ:

**إِنَّمَا الْعِلْمُ كُلُّهُ الْعِلْمُ بِالْآثَارِ.**

**"ಪರಿಪೂರ್ಣ ಜ್ಞಾನವು ಹದೀಸಿನ ಬಗ್ಗೆಯಿರುವ ಜ್ಞಾನವಾಗಿದೆ."**

ಇಮಾಂ ಮಾಲಿಕ್(ರಹ್)ರವರು ಹೇಳುತ್ತಾರೆ:

**مَا مِنَّا إِلَّا رَادٌّ وَمَرْدُودٌ عَلَيْهِ إِلَّا صَاحِبُ هَذَا الْقَبْرِ.**

**"ನಮ್ಮ ಪೈಕಿ (ಅಭಿಪ್ರಾಯಗಳನ್ನು) ತಿರಸ್ಕರಿಸದ ಮತ್ತು (ಅಭಿಪ್ರಾಯಗಳು) ತಿರಸ್ಕರಿಸಲ್ಪಡದವರು ಯಾರೂ ಇಲ್ಲ. ಆ ಗೋರಿಯಲ್ಲಿ ಮಲಗಿರುವವರ ಹೊರತು."** ತರುವಾಯ ಅವರು ಪ್ರವಾದಿ(ﷺ)ರವರ ಗೋರಿಯ ಕಡೆಗೆ ಬೆರಳು ತೋರಿಸಿದರು.

ಇಮಾಮ್ ಅಬೂ ಹನೀಫಾ(ರಹ್)ರವರು ಹೇಳುತ್ತಾರೆ:

**إِذَا جَاءَ الْحَدِيثُ عَنْ رَسُولِ اللَّهِ صَلَّى اللَّهُ عَلَيْهِ وَسَلَّمَ فَعَلَى**

الرَّأْسِ وَالْعَيْنِ.

**“ಅಲ್ಲಾಹನ ಸಂದೇಶವಾಹಕರ(ﷺ) ಕಡೆಯಿಂದ ಹದೀಸೊಂದು ಬಂದಲ್ಲಿ, ಅದನ್ನು ಅಡಿಯಿಂದ ಮುಡಿಯವರೆಗೆ ಸ್ವೀಕರಿಸಬೇಕು.”**

ಇಮಾಮ್ ಅಶ್ಶಾಫಿಈ(ﷺ)ರವರು ಹೇಳುತ್ತಾರೆ:

مَتَى رَوَيْتُ عَنْ رَسُولِ اللَّهِ صَلَّى اللَّهُ عَلَيْهِ وَسَلَّمَ حَدِيثًا صَحِيحًا فَلَمْ آخُذْ بِهِ، فَأُشْهِدُكُمْ أَنَّ عَقْلِي قَدْ ذَهَبَ.

**“ನಾನು ಅಧಿಕೃತ ಹದೀಸೊಂದನ್ನು ವರದಿ ಮಾಡಿ ಅದರಂತೆ ಪ್ರವರ್ತಿಸುವುದಿಲ್ಲವಾದರೆ ಖಂಡಿತವಾಗಿಯೂ ನಾನು ನನ್ನ ಗ್ರಹಣ ಶಕ್ತಿಯನ್ನು ಕಳೆದುಕೊಂಡಿದ್ದೇನೆಂಬುದಕ್ಕೆ ನಿಮ್ಮನ್ನು ಸಾಕ್ಷಿಗಳಾಗಿಸುತ್ತೇನೆ.”**

ಅವರು ಮುಂದುವರಿದು ಹೇಳುತ್ತಾರೆ:

إِذَا قُلْتُ قَوْلًا وَجَاءَ الْحَدِيثُ عَنْ رَسُولِ اللَّهِ صَلَّى اللَّهُ عَلَيْهِ وَسَلَّمَ بِخِلَافِهِ، فَاضْرِبُوا بِقَوْلِي الْحَائِطَ.

**“ನಾನು ಹೇಳಿದ ಯಾವುದಾದರೊಂದು ವಿಷಯವು ಪ್ರವಾದಿ(ﷺ)ರವರ ವಚನಕ್ಕೆ ವಿರುದ್ಧವಾಗಿದೆಯೆಂದಾದಲ್ಲಿ ನನ್ನ ಮಾತುಗಳನ್ನು ಗೋಡೆಗೆಸೆದುಬಿಡಿರಿ.”**

ಇಮಾಮ್ ಅಹ್ಮದ್ ಇಬ್ನ್ ಹಂಬಲ್(ﷺ)ರವರು ಅವರ ಶಿಷ್ಯರಲ್ಲೊಬ್ಬರೊಂದಿಗೆ ಹೇಳಿದರು:

لَا تُقَلِّدْنِي وَلَا تُقَلِّدْ مَالِكًا وَلَا الشَّافِعِيَّ، وَخُذْ مِنْ حَيْثُ أَخَذْنَا.

**“ನನ್ನನ್ನಾಗಲಿ, ಇಮಾಮ್ ಮಾಲಿಕ್‌ರನ್ನಾಗಲಿ, ಇಮಾಮ್ ಶಾಫಿಈಯವರನ್ನಾಗಲಿ ಅಂಧವಾಗಿ ಅನುಕರಿಸಬೇಡ. ಬದಲಾಗಿ ನಾವೆಲ್ಲಿಂದ ಸ್ವೀಕರಿಸಿದೆವೋ ಅಲ್ಲಿಂದಲೇ ಸ್ವೀಕರಿಸು.”**

ಅವರು ಮುಂದುವರಿದು ಹೇಳುತ್ತಾರೆ:

**عَجِبْتُ لِقَوْمٍ عَرَفُوا الْإِسْنَادَ وَصِحَّتَهُ عَنْ رَسُولِ اللَّهِ صَلَّى اللَّهُ عَلَيْهِ وَسَلَّمَ، يَذْهَبُونَ إِلَى رَأْيِ سُفْيَانَ، وَاللَّهُ سُبْحَانَهُ يَقُولُ: ﴿ فَلْيَحْذَرِ ٱلَّذِينَ يُخَالِفُونَ عَنْ أَمْرِهِۦٓ أَن تُصِيبَهُمْ فِتْنَةٌ أَوْ يُصِيبَهُمْ عَذَابٌ أَلِيمٌ ﴿٦٣﴾ ﴾**

**“ವಿಶ್ವಾಸಾರ್ಹ ಸನದ್‌ನ ಮೂಲಕ ವರದಿಯಾದ ಮತ್ತು ಅಲ್ಲಾಹನ ಸಂದೇಶವಾಹಕ (ﷺ)ರಿಂದ ಅಧಿಕೃತವಾಗಿ ಸ್ಥಾಪಿಸಲ್ಪಟ್ಟಿದೆಯೆಂಬುದನ್ನು ಅರಿತು ಕೂಡಾ ಸುಫ್ಯಾನರ ಅಭಿಪ್ರಾಯವನ್ನು ಸ್ವೀಕರಿಸುವ ಜನರ ಬಗ್ಗೆ ಆಶ್ಚರ್ಯವಾಗುತ್ತದೆ. ಅಲ್ಲಾಹು ಹೇಳುತ್ತಾನೆ: ಆದ್ದರಿಂದ ಪ್ರವಾದಿಯವರ ಆಜ್ಞೆಗೆ ವಿರೋಧವಾಗಿ ಸಾಗುವವರು ತಮಗೇನಾದರೂ ಆಪತ್ತು ತಗಲುವುದರ ಬಗ್ಗೆ ಅಥವಾ ಯಾತನಾಮಯ ಶಿಕ್ಷೆ ತಗಲುವುದರ ಬಗ್ಗೆ ಭಯಪಡಲಿ.”**

ಅವರು ಮುಂದುವರಿದು ಹೇಳುತ್ತಾರೆ:

**أَتَدْرِي مَا الْفِتْنَةُ؟ الْفِتْنَةُ: الشِّرْكُ، لَعَلَّهُ إِذَا رَدَّ بَعْضَ قَوْلِهِ صَلَّى اللَّهُ عَلَيْهِ وَسَلَّمَ، أَنْ يَقَعَ فِي قَلْبِهِ شَيْءٌ مِنَ الزَّيْغِ فَيَهْلِكُ.**

**“ಫಿತ್ನವೆಂದರೇನೆಂದು ನಿಮಗೆ ಗೊತ್ತೇ? ಫಿತ್ನವೆಂದರೆ ಅದು ಶಿರ್ಕ್ ಆಗಿದೆ. ಪ್ರವಾದಿ ವಚನಗಳ ಪೈಕಿ ಯಾವುದಾದರೊಂದನ್ನು ಅವನು ನಿರಾಕರಿಸಿದಲ್ಲಿ ಪಥಭ್ರಷ್ಟತೆಯ ಅಲ್ಪಾಂಶವನ್ನು ಅವನ ಹೃದಯಕ್ಕೆ ಇಳಿಸಲಾಗುವುದು ಮತ್ತು ಅವನು ನಾಶ ಹೊಂದುವನು.”**

ಪ್ರಸಿದ್ಧ ತಾಬಿಈ ಆಗಿರುವ ಮುಜಾಹಿದ್ ಇಬ್ನ್ ಜಾಬಿರ್(ﷺ)ರವರು ಅಲ್ಲಾಹನ ವಚನವಾದ **“ನಿಮ್ಮೊಳಗೆ ಯಾವುದಾದರೊಂದಿಗೆ ವಿಷಯದಲ್ಲಿ ಭಿನ್ನಾಭಿಪ್ರಾಯವುಂಟಾದರೆ ಅದನ್ನು ಅಲ್ಲಾಹನೆಡೆಗೂ, ಅವನ ಸಂದೇಶವಾಹಕರೆಡೆಗೂ ಮರಳಿಸಿರಿ”** ಎಂಬುದನ್ನು ಹೀಗೆಂದು ವ್ಯಾಖ್ಯಾನಿಸಿರುವುದಾಗಿ ಅಲ್‌ಬೈಹಕೀ ಉದ್ಧರಿಸುತ್ತಾರೆ:

**الرَّدُّ إِلَى اللَّهِ الرَّدُ إِلَى كِتَابِهِ، وَالرَّدُّ إِلَى رَسُولِهِ الرَّدُّ إِلَى السُّنَّةِ.**

**"ಅಲ್ಲಾಹನೆಡೆಗೆ ಮರಳಿಸಿರಿ ಎಂದರೆ ಭಿನ್ನಾಭಿಪ್ರಾಯಗಳನ್ನು ಅಲ್ಲಾಹನ ಗ್ರಂಥದ ಕಡೆಗೆ ತಿರುಗಿಸಿರಿ ಮತ್ತು ಅವನ ಸಂದೇಶವಾಹಕರೆಡೆಗೆ ಮರಳಿಸಿರಿ ಎಂದರೆ ಅಸ್ಸುನ್ನಃ (ಪ್ರವಾದಿಚರ್ಯೆ)ದ ಕಡೆಗೆ ತಿರುಗಿಸಿರಿ ಎಂದರ್ಥ."**

ಅಝ್ಝುಹ್ರೀ(ﷺ)ರವರು ಹೇಳಿದ್ದಾಗಿ ಅಲ್‌ಬೈಹಕೀ ಉದ್ಧರಿಸುತ್ತಾರೆ:

كَانَ مَنْ مَضَى مِنْ عُلَمَائِنَا يَقُولُونَ: الِاعْتِصَامُ بِالسُّنَّةِ نَجَاةٌ.

**"ನಮ್ಮ ಪೈಕಿ ಗತಿಸಿಹೋದ ವಿದ್ವಾಂಸರು ಹೇಳುತ್ತಿದ್ದರು: ಸುನ್ನತ್‌ಗೆ ಬಲವಾಗಿ ಅಂಟಿಕೊಳ್ಳುವುದೇ ರಕ್ಷೆಯ ಮಾರ್ಗ."**

ರೌದತು ನ್ನಾದಿರ್ ಎಂಬ ತಮ್ಮ ಗ್ರಂಥದಲ್ಲಿ ವಿಧಿ ತೀರ್ಮಾನಿಸಲು ಆವಶ್ಯಕವಾಗಿರುವ ಮೂಲಭೂತ ತತ್ವಗಳ ಬಗ್ಗೆ ವಿವರಣೆ ನೀಡುತ್ತಾ ಮುವಫ್ಫಕುದ್ದೀನ್ ಇಬ್ನ್ ಕುದಾಮ (ﷺ)ರವರು ಹೇಳುತ್ತಾರೆ:

وَالْأَصْلُ الثَّانِي مِنَ الْأَدِلَّةِ سُنَّةُ رَسُولِ اللَّهِ صَلَّى اللَّهُ عَلَيْهِ وَسَلَّمَ، وَقَوْلُ رَسُولِ اللَّهِ صَلَّى اللَّهُ عَلَيْهِ وَسَلَّمَ حُجَّةٌ لِدَلَالَةِ الْمُعْجِزَةِ عَلَى صِدْقِهِ، وَلِأَمْرِ اللَّهِ بِطَاعَتِهِ، وَتَحْذِيرِهِ مِنْ مُخَالَفَةِ أَمْرِهِ.

**"ಎರಡನೆಯ ಮೂಲಭೂತ ಆಧಾರ ಪ್ರಮಾಣವು ಸುನ್ನತ್ ಆಗಿದೆ. ಅಲ್ಲಾಹನ ಸಂದೇಶವಾಹಕರ(ﷺ) ವಚನಗಳು ಸಹ ಒಂದು ಪುರಾವೆಯೇ ಆಗಿದೆ. ಏಕೆಂದರೆ ಅದರ ಸತ್ಯಸಂಧತೆಯು ಅವರ ಪವಾಡಗಳ ಮೂಲಕ ಪ್ರಮಾಣೀಕರಿಸಲ್ಪಟ್ಟಿದೆ ಮತ್ತು ಅವರ ಅನುಸರಣೆಯನ್ನು ಅಲ್ಲಾಹು ಆಜ್ಞಾಪಿಸಿರುವನು. ಮತ್ತು ಅವರ ಆಜ್ಞೆಗೆ ವಿರುದ್ಧವಾಗಿ ಚಲಿಸುವುದರ ಕುರಿತು ಅವನು ಎಚ್ಚರಿಸಿರುವನು."**

ಹಾಫಿದ್ ಇಬ್ನ್ ಕಸೀರ್(ﷺ)ರವರು ತಮ್ಮ ತಫ್ಸೀರ್‌ನಲ್ಲಿ ಅಲ್ಲಾಹನ ಗ್ರಂಥದ 24ನೇ ಅಧ್ಯಾಯದ 63ನೇ ಸೂಕ್ತಿ (ಆದ್ದರಿಂದ ಪ್ರವಾದಿಯವರ ಆಜ್ಞೆಗೆ ವಿರೋಧವಾಗಿ ಸಾಗುವವರು ತಮಗೇನಾದರೂ ಆಪತ್ತು ತಗಲುವುದರ ಬಗ್ಗೆ ಅಥವಾ ಯಾತನಾಮಯ ಶಿಕ್ಷೆ ತಗಲುವುದರ ಬಗ್ಗೆ ಭಯಪಡಲಿ)ಯನ್ನು ಹೀಗೆಂದು ವ್ಯಾಖ್ಯಾನಿಸುತ್ತಾರೆ:

أَيْ عَنْ أَمْرِ رَسُولِ اللَّهِ صَلَّى اللَّهُ عَلَيْهِ وَسَلَّمَ، وَهُوَ سَبِيلُهُ وَمِنْهَاجُهُ وَطَرِيقَتُهُ وَسُنَّتُهُ وَشَرِيعَتُهُ.

**"ಅರ್ಥಾತ್ ಅಲ್ಲಾಹನ ಸಂದೇಶವಾಹಕರ(ﷺ) ಆಜ್ಞೆಯನ್ನು ಉಲ್ಲಂಘಿಸುವವರು ಪ್ರವಾದಿ(ﷺ)ರವರ ನಡೆ, ವಿಧಾನ, ರೀತಿ ಚರ್ಯೆ ಮತ್ತು ಅವರಿಗೆ ಅವತೀರ್ಣಗೊಂಡ ಶರೀಅತ್ (ಧಾರ್ಮಿಕ ನಿಯಮ)ಗಳೆಲ್ಲವೂ ಅವರ ಆಜ್ಞೆಗಳಾಗಿವೆ."**

ಆದುದರಿಂದ ಪ್ರವಾದಿ(ﷺ)ರವರದ್ದೆಂದು ದೃಢಪಟ್ಟವುಗಳೆಲ್ಲವೂ ಸ್ವೀಕಾರಯೋಗ್ಯವಾಗಿವೆ ಮತ್ತು ಅವರ ಚರ್ಯೆಗೆ ವಿರುದ್ಧವಾಗಿರುವುದೆಲ್ಲವೂ ವರ್ಜಿಸಬೇಕಾಗಿದೆ. ಅದನ್ನು ಹೇಳುವ ಮತ್ತು ಮಾಡುವ ವ್ಯಕ್ತಿ ಎಷ್ಟೇ ಗಣ್ಯನಾಗಿದ್ದರೂ ಕೂಡ. ಈ ವಿಷಯವು ಸಹೀಹೈನ್‌ಗಳಲ್ಲಿ ಅಲ್ಲದೇ ಇನ್ನಿತರ ಹದೀಸ್ ಗ್ರಂಥಗಳಲ್ಲೂ ಉಲ್ಲೇಖಿಸಲ್ಪಟ್ಟಿದೆ. ಅಲ್ಲಾಹನ ಸಂದೇಶವಾಹಕರು(ﷺ) ಹೇಳಿದರು:

«مَنْ عَمِلَ عَمَلًا لَيْسَ عَلَيْهِ أَمْرُنَا فَهُوَ رَدٌّ»

**"ನನ್ನ ಆದೇಶವಿಲ್ಲದ ಕಾರ್ಯವೊಂದನ್ನು ಯಾರಾದರೂ ಎಸಗಿದಲ್ಲಿ ಅದು ತಿರಸ್ಕರಿಸಲ್ಪಡುವುದು."**

ಅರ್ಥಾತ್ ಪ್ರವಾದಿ(ﷺ)ರವರು ವಿಧಿಸಿರುವುದಕ್ಕೆ ವಿರುದ್ಧವಾಗಿ ಕಾರ್ಯವೆಸಗುವವರು ಕಠಿಣ ಯಾತನೆ ಎರಗುವುದನ್ನು ಭಯಪಡಲಿ. ಆ ಯಾತನೆಯು ಇಹಲೋಕದಲ್ಲಿ ಬರುವಂತಹ ಮರ್ದನಕ್ಕೊಳಗಾಗುವುದು, ಕೊಲ್ಲಲ್ಪಡುವುದು, ಕಾರಾಗ್ರಹ ವಾಸವನ್ನನುಭವಿಸುವುದು ಇತ್ಯಾದಿಗಳಾಗಿವೆ.

ಇಮಾಮ್ ಅಹ್ಮದ್(رحمه الله)ರವರು ಹೇಳುತ್ತಾರೆ:

ಅಬ್ದುರ್ರಝ್ಝಾಕ್ ಮಅ್‌ಮರ್‌ರಿಂದ, ಅವರು ಹಮ್ಮಾಮ್ ಇಬ್ನ್ ಮುನಬ್ಬಿಹ್‌ರಿಂದ, ಅವರು ಅಬೂಹುರೈರಾ(رضي الله عنه)ರಿಂದ ವರದಿ ಮಾಡುತ್ತಾರೆ:

«مَثَلِي وَمَثَلُكُمْ كَمَثَلِ رَجُلٍ اسْتَوْقَدَ نَارًا فَلَمَّا أَضَاءَتْ مَا حَوْلَهَا جَعَلَ الْفَرَاشُ وَهَذِهِ الدَّوَابُّ اللَّائِي يَقَعْنَ فِي النَّارِ يَقَعْنَ فِيهَا وَجَعَلَ يَحْجِزُهُنَّ وَيَغْلِبْنَهُ فَيَتَقَحَّمْنَ فِيهَا، قَالَ: فَذَلِكَ مَثَلِي

وَمَثَلُكُمْ، أَنَا آخِذٌ بِحُجَزِكُمْ عَنِ النَّارِ هَلُمَّ عَنِ النَّارِ فَتَغْلِبُونِي وَتَقْتَحِمُونَ فِيهَا»

"ಅಲ್ಲಾಹನ ಸಂದೇಶವಾಹಕರು(ﷺ) ಹೇಳಿದರು: ನನ್ನ ಉದಾಹರಣೆಯು ಬೆಂಕಿಯನ್ನು ಉರಿಸಿದ ಒಬ್ಬ ವ್ಯಕ್ತಿಯ ಉದಾಹರಣೆಯಂತಿದೆ. ಅದರ ಜ್ವಾಲೆಯು ಸುತ್ತಲೂ ಆವರಿಸುತ್ತದೆ. ಕ್ರಿಮಿಕೀಟಗಳು ಜ್ವಾಲೆಯತ್ತ ಧಾವಿಸಿ ಬರುತ್ತವೆ. ಅವನು ಅವುಗಳನ್ನು ತಡೆಯಲು ಪ್ರಯತ್ನಿಸುವನು. ಆದರೆ ಅವು ಅವನನ್ನು ದಾಟಿ ಜ್ವಾಲೆಯೊಳಗೆ ಧುಮುಕುತ್ತವೆ. ನಿಮಗೆ ಸಂಬಂಧಿಸಿದಂತೆ ನನ್ನ ಉದಾಹರಣೆಯೂ ಅದೇ ರೀತಿಯಿದೆ. ಬೆಂಕಿಯಿಂದ ದೂರವಿರಿ ಎಂದು ಕೂಗುತ್ತಾ ನಾನು ನಿಮ್ಮ ಸೊಂಟಪಟ್ಟಿಯನ್ನು ಹಿಡಿದು ಜ್ವಾಲೆಯಿಂದ ನಿಮ್ಮನ್ನು ದೂರಸರಿಸಲು ಪ್ರಯತ್ನಿಸುತ್ತಿರುವೆನು. ಆದರೆ ನೀವು ಪರಿವೆಯಿಲ್ಲದೆ ನನ್ನನ್ನು ಮೀರಿ ಅದರತ್ತ ಧಾವಿಸುತ್ತಿರುವಿರಿ."

ಇಬ್ಬರು ಮುಹದ್ದಿಸ್‌ಗಳೂ ಅಬ್ದುರ್ರಝ್ಝಾಕ್(رحمه الله)ರಿಂದಲೇ ವರದಿ ಮಾಡಿರುತ್ತಾರೆ.

ಮಿಫ್ತಾಹುಲ್ ಜನ್ನಃ ಫೀ ಇಹ್ತಿಜಾಜಿ ಬಿಸ್ಸುನ್ನಃ (ಸ್ವರ್ಗದ ಕೀಲಿಕೈಯು ಸುನ್ನತ್ತನ್ನು ಆಧಾರ ಪ್ರಮಾಣವಾಗಿ ಸ್ವೀಕರಿಸುವುದಾಗಿದೆ) ಎಂಬ ಗ್ರಂಥದಲ್ಲಿ ಅಸ್ಸುಯೂತೀ(رحمه الله) ಹೇಳುತ್ತಾರೆ:

اعْلَمُوا رَحِمَكُمُ اللَّهُ، أَنَّ مَنْ أَنْكَرَ أَنَّ كَوْنَ حَدِيثِ النَّبِيِّ صَلَّى اللَّهُ عَلَيْهِ وَسَلَّمَ قَوْلًا كَانَ أَوْ فِعْلًا بِشَرْطِهِ الْمَعْرُوفِ فِي الْأُصُولِ حُجَّةٌ كَفَرَ وَخَرَجَ عَنْ دَائِرَةِ الْإِسْلَامِ، حُشِرَ مَعَ الْيَهُودِ وَالنَّصَارَى، أَوْ مَعَ مَنْ شَاءَ اللَّهُ مِنْ فِرَقِ الْكَفَرَةِ.

"ತಿಳಿಯಿರಿ, ಅಲ್ಲಾಹನ ಕರುಣೆಯು ನಿಮ್ಮ ಮೇಲಿರಲಿ. ಅಲ್ಲಾಹನ ಪ್ರವಾದಿ (ﷺ)ರವರ ಹದೀಸೊಂದನ್ನು ಅದು ತನ್ನದೇ ಆದ (ಹದೀಸ್ ಶಾಸ್ತ್ರ) ನಿಯಮಗಳಿಂದ ಅಧಿಕೃತವೆಂದು ದೃಢಪಟ್ಟಿರುವುದನ್ನು ಅರಿತ ಬಳಿಕವೂ ಅದನ್ನು ನಿರಾಕರಿಸಿದವನು ಸತ್ಯನಿಷೇಧವನ್ನು ಕೈಗೊಂಡನು ಹಾಗೂ ಇಸ್ಲಾಮಿನ ವರ್ತುಲದಿಂದ ಹೊರತಳ್ಳಲ್ಪಟ್ಟನು. ಅವನು ಯಹೂದಿಗಳೊಂದಿಗೋ, ಕ್ರೈಸ್ತರೊಂದಿಗೋ ಎಬ್ಬಿಸಲ್ಪಡುವನು ಅಥವಾ ಅಲ್ಲಾಹನಿಚ್ಛಿಸಿದ ಇನ್ನಿತರ ಸತ್ಯನಿಷೇಧಿ ವಿಭಾಗಗಳೊಂದಿಗೆ (ಎಬ್ಬಿಸಲ್ಪಡುವನು)."

ಸಹಾಬಿಗಳು, ತಾಬಿಊನ್‌ಗಳು ಮತ್ತು ತದನಂತರ ಬಂದ ಅನೇಕ ಉಲಮಾಗಳು ಸುನ್ನತ್ತನ್ನು ಗೌರವಿಸುವ ಮಾನ್ಯತೆ ನೀಡುವ ಮತ್ತು ಅದರಂತೆ ಕಾರ್ಯವೆಸಗುವ ಹೊಣೆಗಾರಿಕೆ ಹಾಗೂ ಅದಕ್ಕೆ ವ್ಯತಿರಿಕ್ತವಾಗಿ ನಡೆಯುವುದರ ವಿರುದ್ಧ ಎಚ್ಚರಿಕೆ ನೀಡಿರುವುದರ ಬಗ್ಗೆ ಇನ್ನೂ ಅನೇಕ ವರದಿಗಳಿವೆ.

ಕುರ್‌ಆನ್‌ನ ಸೂಕ್ತಿಗಳು, ಹದೀಸ್‌ಗಳು ಮತ್ತು ಇನ್ನಿತರ ಉಲ್ಲೇಖಗಳಿಂದ ನಾವು ತಿಳಿಸಿದ ವಿಷಯಗಳು ಒಬ್ಬ ಸತ್ಯಾನ್ವೇಷಿಗೆ ಮನವರಿಕೆ ಮಾಡಿಕೊಡಲು ಧಾರಾಳ ಸಾಕು ಎಂಬುದು ನನ್ನ ಅನಿಸಿಕೆ.

ನನಗೆ ಮತ್ತು ಸಕಲ ಮುಸ್ಲಿಮರಿಗೆ ಅಲ್ಲಾಹನ ಸಂತೃಪ್ತಿಯನ್ನು ಗಳಿಸಿಕೊಳ್ಳುವಲ್ಲಿ ಯಶಸ್ಸನ್ನು, ಹಾಗೂ ಅವನ ಕ್ರೋಧದಿಂದ ರಕ್ಷಣೆಯನ್ನು ನಾನು ಅಲ್ಲಾಹನಲ್ಲಿ ಬೇಡುತ್ತಿದ್ದೇನೆ. ಅವನು ತೋರಿಸಿದ ನೇರ ಮಾರ್ಗದಲ್ಲಿ ನಡೆಯಲು ನಮ್ಮೆಲ್ಲರನ್ನೂ ಅವನು ಅನುಗ್ರಹಿಸಲಿ. ಖಂಡಿತವಾಗಿಯೂ ಅವನು ಆಲಿಸುವವನೂ, ಉತ್ತರಿಸುವವನೂ, ಅತ್ಯಂತ ನಿಕಟನಾಗಿರುವವನೂ ಆಗಿರುವನು.

ಪ್ರವಾದಿ ಮುಹಮ್ಮದ್(ﷺ)ರವರ ಮೇಲೂ, ಅವರ ಕುಟುಂಬದ ಮೇಲೂ, ಅವರ ಸಹಾಬಾಗಳ ಮೇಲೂ, ಅವರನ್ನು ಅನುಸರಿಸಿ ಜೀವಿಸುವವರ ಮೇಲೂ ಅಲ್ಲಾಹು ಅವನ ಅನುಗ್ರಹವನ್ನು ವರ್ಷಿಸುತ್ತಿರಲಿ. ಆಮೀನ್.

# ನಮ್ಮ ಇತರ ಪ್ರಕಟಣೆಗಳು

1. ಮಾನವಕುಲದಲ್ಲಿ ಶಿರ್ಕ್ ಸಾಗಿ ಬಂದ ದಾರಿ
2. ತವಸ್ಸುಲ್ –ಅದರ ವಿಧಗಳು ಮತ್ತು ವಿಧಿಗಳು
3. ದಿಕ್ರ್‌ಗಳು ಪ್ರವಾದಿ(ﷺ)ರವರ ವಚನಗಳಿಂದ
4. ತೌಹೀದ್‌ನ ನೈಜ ವಿಶ್ವಾಸ
5. ಅಹ್ಲು ಸುನ್ನ ವಲ್ ಜಮಾಅತಿನ ವಿಶ್ವಾಸ
6. ಹಜ್ ಮತ್ತು ಉಮ್ರಾ
7. ಪ್ರವಾದಿ(ﷺ)ರವರ ನಮಾಝ್ ಕ್ರಮ (ಸಂಕ್ಷಿಪ್ತವಾಗಿ)
8. ಪ್ರವಾದಿ(ﷺ)ರವರ ಮರಣ –ದುರಂತ ಮತ್ತು ಪರಿಣಾಮ
9. ದುಲ್‌ಹಜ್ ಹತ್ತರ ಶ್ರೇಷ್ಠತೆಗಳು
10. ಇಸ್ಲಾಮನ್ನು ಅರಿಯಲು ಒಂದು ಸಂಕ್ಷಿಪ್ತ, ಸಚಿತ್ರ ಮಾರ್ಗದರ್ಶಿ
11. ಆಧುನಿಕವಾದಿಗಳು ಮತ್ತು ಹದೀಸ್ ನಿಷೇಧಿಗಳು
12. ಅಲ್ಲಾಹನೆಡೆಗೆ ದಅ್‌ವಾ ಮಾಡುವವನ ಪೂರ್ವಸಿದ್ಧತೆ


ಪ್ರತಿಗಳಿಗಾಗಿ ಸಂಪರ್ಕಿಸಿರಿ:

# Manhaj-Al-Ambiya

## CD/DVD & Book Store

**Hotel Intercity Building, Opp. Ibrahim Khaleel Masjid,**
**Nellikai Road, Mangalore - 575 001**

**Telephone: (91) 824 244 3484**

**Mobile : 961 107 1403, 961 107 1429**

*Email : iicmanglore@gmail.com*

# Manhaj-Al-Ambiya

Call & Guidance Centre ®

Mangalore

*Email : al.ambiya@gmail.com*

**ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ಸುನ್ನತ್ ಆಧಾರಿತ ಪುಸ್ತಕಗಳಿಗೆ**
**ಮತ್ತು**
**ಇಸ್ಲಾಮಿಕ್ ಸಿಡಿ/ಡಿವಿಡಿಗಳಿಗೆ**

**ನಮ್ಮ ಈ ಕೆಳಗಿನ ಶಾಖೆಗೆ ಭೇಟಿ ನೀಡಿರಿ**

# CD/DVD & Book Store

**Hotel Intercity Building, Opp. Ibrahim Khaleel Masjid,**
**Nellikai Road, Mangalore - 575 001**

**Telephone: (91) 824 244 3484**

**Mobile : 961 107 1403, 961 107 1429**

*Email : iicmanglore@gmail.com*

ಇಸ್ಲಾಮಿನ ಕುರಿತು ಮುಸ್ಲಿಮ್ ಮತ್ತು ಮುಸ್ಲಿಮೇತರರಲ್ಲಿರುವ
ತಪ್ಪುಕಲ್ಪನೆಗಳ ನಿವಾರಣೆಗಾಗಿ

# ಸತ್ಯ ಸಾರಥಿ

ಮಾಸಿಕ




**ಓದಿರಿ... ಪ್ರೋತ್ಸಾಹಿಸಿರಿ... ಚಂದಾದಾರರಾಗಿರಿ...**

**ಚಂದಾದರ ವಾರ್ಷಿಕ : ₹ 120.00**
**ಅರ್ಧವಾರ್ಷಿಕ : ₹ 60.00**

ಹೆಚ್ಚಿನ ಮಾಹಿತಿಗಳಿಗಾಗಿ ಸಂಪರ್ಕಿಸಿರಿ:

**ಸತ್ಯಸಾರಥಿ ಕನ್ನಡ ಮಾಸಿಕ,**
**14–37 ಜಿ(1), ವಿನಾಯಕ ಕಾಂಪ್ಲೆಕ್ಸ್,**
**ಕೈಕಂಬ, ಬಿ. ಸಿ. ರೋಡ್, ಬಂಟ್ವಾಳ ದ.ಕ.**
**ಮೊಬೈಲ್: 9632897299**
*email: satyasarathi2011@gmail.com*